# ಒಂದು ತಪ್ಪುಗ್ರಹಿಕೆಯ ನಿವಾರಣೆ



ಗ್ರಂಥಕರ್ತ:
ಹಝ಼್ರತ್ ಮಿರ್ಝಾ಼ ಗ಼ುಲಾಂ ಅಹ್ಮದ್(ಅ)

# ಒಂದು ತಪ್ಪುಗ್ರಹಿಕೆಯ ನಿವಾರಣೆ

(ಏಕ್ ಗ಼ಲತೀ ಕಾ ಇಝಾಲ)

*

ಗ್ರಂಥಕರ್ತ:

**ಹಝ಼್ರತ್ ಮಿರ್ಝ಼ಾ ಗ಼ುಲಾಂ ಅಹ್ಮದ್**

*

ಭಾಷಾಂತರ:

**ಎಂ. ಉಬೈದುಲ್ಲಾಹ್, ಎಂ.ಎ., ಎಲ್.ಎಲ್.ಬಿ**

*

ಪ್ರಕಾಶಕರು:

**ನಝ಼ಾರತ್ ನಶ್ರೋ ಇಶಾಅತ್**

ಭಾರತ

# Ondu thappugrahikeya nivarane

Kannada rendering of Urdu work:

ایک غلطی کا ازالہ

*"Eik Ghalati ka Izaala"*


| | |
|---|---|
| Translated by : | M. Ubeidullah, M.A., L.L.B. |
| Reviewed by : | Muhammad Yusuf, B.com., |
| | Moulavi Inamullah. |
| Typing & Setting | U. Basheer Ahmad, Manjeshwar ., |
| | Inamullah Mangaluru. |
| Published by : | Nazarat Nashro - Isha'at, Qadian, |
| | Distt. Gurdaspur, Punjab -143516 |
| First Edition : | 2022 |
| Copies : | 500 |
| Printed at : | Fazl-e-Umar Printing Press, Qadian |



ಹಝ್ರತ್ ಮಿರ್ಝಾ ಗ಼ುಲಾಮ್ ಅಹ್ಮದ್ ಅಲೈಹಿಸ್ಸಲಾಮ್

ವಾಗ್ದತ್ತ ಮಹ್‌ದೀ ಮತ್ತು ಮಸೀಹ್

## ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್

ವಾಗ್ದತ್ತ ಮಸೀಹ್ ಮತ್ತು ಮಹ್‌ದಿಯಾಗಿ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಹಝ್‌ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮ್ ಕ್ರಿಸ್ತಶಕ 1835ರಲ್ಲಿ ಭಾರತದ ಪಂಜಾಬಿನ ಒಂದು ಗ್ರಾಮವಾದ ಖಾದಿಯಾನಿನಲ್ಲಿ ಜನಿಸಿದರು. ಅವರು ಆರಂಭ ಕಾಲದಿಂದಲೇ ಅಲ್ಲಾಹನ ಆರಾಧನೆ, ಪ್ರಾರ್ಥನೆಗಳಲ್ಲೂ ಪವಿತ್ರ ಖುರ್‌ಆನ್ ಮತ್ತು ಇತರ ಧಾರ್ಮಿಕ ಗ್ರಂಥಗಳ ಅಧ್ಯಯನದಲ್ಲಿಯೂ ಮಗ್ನರಾಗಿದ್ದರು. ಆ ಕಾಲದಲ್ಲಿ ಇಸ್ಲಾಮ್ ಧರ್ಮ ನಾಲ್ಕು ದಿಕ್ಕುಗಳಿಂದಲೂ ಆಕ್ರಮಣಗಳಿಗೆ ಗುರಿಯಾಗಿತ್ತು. ಇಸ್ಲಾಮ್ ಧರ್ಮದ ಶೋಚನೀಯ ಸ್ಥಿತಿಯನ್ನು ಕಂಡು ಅವರಿಗೆ ತೀವ್ರವಾಗಿ ದುಃಖವಾಗುತ್ತಿತ್ತು. ಇಸ್ಲಾಮ್ ಧರ್ಮದ ವಿರುದ್ಧದ ಅನ್ಯ ಧರ್ಮದವರ ಆಕ್ರಮಣಗಳನ್ನು ಪ್ರತಿರೋಧಿಸಲು ಮತ್ತು ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅವುಗಳ ವಾಸ್ತವಿಕ ರೂಪದಲ್ಲಿ ಲೋಕದ ಮುಂದೆ ಪ್ರಕಟಿಸಲು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 90ಕ್ಕಿಂತ ಹೆಚ್ಚು ಗ್ರಂಥಗಳನ್ನು ಬರೆದರು. ಸಾವಿರಾರು ಪತ್ರಗಳನ್ನು ಬರೆದರು ಮತ್ತು ಅನೇಕ ಧಾರ್ಮಿಕ ಸಂವಾದಗಳಲ್ಲಿ ಅನ್ಯಧರ್ಮದವರನ್ನು ಎದುರಿಸಿದರು. ಸೃಷ್ಟಿಕರ್ತನಾದ ಅಲ್ಲಾಹನೊಂದಿಗೆ ಸಂಬಂಧವನ್ನು ಮನುಷ್ಯರಿಗೆ ದೊರಕಿಸಿಕೊಡಬಲ್ಲ ಜೀವಂತ ಧರ್ಮ ಇಸ್ಲಾಮ್ ಎಂದೂ ಆ ಧರ್ಮವನ್ನು ಅನುಸರಿಸುವ ಮೂಲಕ ಮನುಷ್ಯನಿಗೆ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆ ಲಭಿಸುವುದು ಎಂದೂ ಅವರು ಪ್ರತಿಪಾದಿಸಿದರು.

ಅವರಿಗೆ ಚಿಕ್ಕ ವಯಸ್ಸಿನಿಂದಲೇ ಸತ್ಯ ಸ್ವಪ್ನಗಳ, ದಿವ್ಯದರ್ಶನಗಳ ಮತ್ತು ದೈವಿಕ ಸಂಬೋಧನೆಗಳ ಭಾಗ್ಯ ಲಭಿಸಿತ್ತು. 1889ರಲ್ಲಿ ದೈವಿಕ ನಿರ್ದೇಶನದ ಪ್ರಕಾರ ಅವರು ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಂಬ ಪರಿಶುದ್ಧ ಜಮಾಅತನ್ನು ಸ್ಥಾಪಿಸಿ ಜನರಿಂದ ಬೈಅತ್ (ನಿಷ್ಠೆಯ ಪ್ರತಿಜ್ಞೆ) ಪಡೆಯಲು ಪ್ರಾರಂಭಿಸಿದರು. ದಿನ ಕಳೆದಂತೆ ಅವರಿಗೆ ದೈವಿಕ ಸಂಬೋಧನೆಗಳು ಸಹ ವರ್ಧಿಸುತ್ತಾ ಇದ್ದುವು. ಲೋಕದ ವಿವಿಧ ಧರ್ಮಗಳಲ್ಲಿ ವಿವಿಧ ಹೆಸರುಗಳಲ್ಲಿ ಭವಿಷ್ಯ ನುಡಿಯಲಾದ ಅಂತಿಮ ಕಾಲಘಟ್ಟದ ಧರ್ಮಸುಧಾರಕ ನಾನೇ ಆಗಿರುವೆನು ಎಂದು ಅವರು ದೇವಾಜ್ಞೆ ಪ್ರಕಾರ ಘೋಷಿಸಿದರು. ಹಝ್‌ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಲೋಕದ ಅಂತಿಮ ಕಾಲಘಟ್ಟದಲ್ಲಿ ಆಗಮಿಸುವರೆಂದು ಶುಭವಾರ್ತೆ ನೀಡಿದ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಸಹ ತಾನೆಂದು ಅವರು ವಾದಿಸಿದರು. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ ಲೋಕದ ಇನ್ನೂರಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿಸಲ್ಪಟ್ಟಿದೆ.

1908ರಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಿಧನ ಹೊಂದಿದಾಗ ಪವಿತ್ರ ಖುರ್‌ಆನಿನ ಆದೇಶಗಳ ಮತ್ತು ಹಝ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿಗಳ ಪ್ರಕಾರ ಅವರ ಆಗಮನೋದ್ದೇಶವನ್ನು ಪರಿಪೂರ್ಣವಾಗಿ ಈಡೇರಿಸಲು ಖಿಲಾಫತ್ ವ್ಯವಸ್ಥೆ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನಲ್ಲಿ ಸ್ಥಾಪಿಸಲ್ಪಟ್ಟಿತು. ಈಗ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್[(ಅಯ್ಯದಹುಲ್ಲಾಹ್)] ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಐದನೇ ಖಲೀಫರಾಗಿರುವರು.

# ಮುನ್ನುಡಿ

ಇದು 1901 ನವೆಂಬರ್ ದಿನಾಂಕ 5ರಂದು ವಿಜ್ಞಾಪನೆ ರೂಪದಲ್ಲಿ ಪ್ರಕಟಿಸಲಾದ ಕಿರುಹೊತ್ತಗೆಯಾಗಿದೆ. ಇದನ್ನು ಪ್ರಕಟಿಸಲು ಉಂಟಾದ ಕಾರಣವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ವಿವರಿಸುತ್ತಾರೆ: "ತಾನು ರಸೂಲ್ ಎಂದೂ ನಬಿ ಎಂದೂ ವಾದಿಸುವ ಒಬ್ಬ ವ್ಯಕ್ತಿಗೆ ನೀವು ಬೈಅತ್ ಮಾಡಿರುವಿರಿ ಎಂದು ನಮ್ಮ ಜಮಾಅತಿಗೆ ಸೇರಿದ ಒಬ್ಬರೊಡನೆ ಒಬ್ಬ ವಿರೋಧಿ ಕೆಲವು ದಿನಗಳ ಹಿಂದೆ ಆಕ್ಷೇಪ ಸೂಚಿಸಿದನು. ಆಗ ಅದಕ್ಕೆ ನಿರಾಕರಣೆ ರೂಪದಲ್ಲಿ ಉತ್ತರ ನೀಡಲಾಯಿತು. ಆದರೆ ಆ ಉತ್ತರ ಸರಿಯಾಗಿರಲಿಲ್ಲ. ಸತ್ಯವೇನೆಂದರೆ, ಅಲ್ಲಾಹನು ತನ್ನ ಪರಿಶುದ್ಧ ಸಂದೇಶವಾಣಿ (ವಹ್ಯ್) ನನಗೆ ಅವತೀರ್ಣಗೊಳಿಸಿದ್ದಾನೆ. ಅದರಲ್ಲಿ ರಸೂಲ್, ಮುರ್‌ಸಲ್ ಮತ್ತು ನಬಿ ಎಂಬ ಶಬ್ದಗಳಿವೆ. ಈ ಪದಗಳು ಒಮ್ಮೆ ಅಲ್ಲ, ನೂರಾರು ಸಲ ನನಗೆ ಅವತೀರ್ಣವಾಗಿವೆ. ಹೀಗಿರುವಾಗ ಅಂತಹ ಶಬ್ದಗಳು ಇಲ್ಲ ಎಂಬ ಉತ್ತರ ಸರಿಯಾಗಲು ಹೇಗೆ ಸಾಧ್ಯ? ಈಗ ಮುಂಚೆಗಿಂತ ಬಹಳ ಸ್ಪಷ್ಟವಾಗಿ ಈ ಶಬ್ದಗಳು ನನಗೆ ಅವತೀರ್ಣವಾಗುವ ಸಂದೇಶವಾಣಿಗಳಲ್ಲಿ ಇವೆ."

**(ಒಂದು ತಪ್ಪುಗ್ರಹಿಕೆಯ ನಿವಾರಣೆ, ಪುಟ–1)**

ಇದೊಂದು ಮಹತ್ವಪೂರ್ಣವಾದ ಪುಸ್ತಕವಾಗಿದೆ. 1901ರ ಮೊದಲು ಮತ್ತು ಅನಂತರದ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬರಹಗಳಲ್ಲಿ ತನ್ನ ನುಬುವ್ವತಿಗೆ ಸಂಬಂಧಿಸಿದ ವಿವರಣೆಗಳಲ್ಲಿ ಬಾಹ್ಯವಾಗಿ ಕಂಡು ಬರುವ ವ್ಯತ್ಯಾಸಗಳ ಬಗ್ಗೆ ತಾತ್ವಿಕವಾದ ವಿವರಣೆಯನ್ನು ಈ ಪುಸ್ತಕದಲ್ಲಿ ನೀಡಲಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು 1901ರ ಮೊದಲು ಬರೆದ ಲೇಖನಗಳಲ್ಲಿ ತಾನು ನಬಿಯಾಗಿರುವುದನ್ನು ಬಹಳ ಹೆಚ್ಚಾಗಿ ನಿರಾಕರಿಸಿರುವರು. 1901ರ ನಂತರದ ಲೇಖನಗಳಲ್ಲಿ ತಾನು ನಬಿ ಎಂಬುದನ್ನು ಬಹಳ ಹೆಚ್ಚಾಗಿ ಒತ್ತಿ ಹೇಳಿರುವರು.

ನಬಿ ಪದದ ಅರ್ಥ ಅಲ್ಲಾಹನಿಂದ ಅದೃಶ್ಯ ವಿಷಯಗಳ ಬಗ್ಗೆ ಸಮಾಚಾರ ಗಳಿಸಿ ಜನರಿಗೆ ತಿಳಿಸುವವ ಎಂದು ಪ್ರಸ್ತಾಪಿಸಿ ತಾನು ಅದೃಶ್ಯ

ವಿಷಯಗಳಿಗೆ ಸಂಬಂಧಿಸಿ ಪ್ರಕಟಿಸಿದ 150 ಭವಿಷ್ಯವಾಣಿಗಳು ಈಡೇರಿದುವು ಎಂದು ವಿವರಿಸುತ್ತಾ ಈ ಪುಸ್ತಕದಲ್ಲಿ ಹೀಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಹೀಗಿರುವಾಗ ನಾನು ನನ್ನ ಬಗ್ಗೆ ನಬಿ ಎಂದೂ ರಸೂಲ್ ಎಂದೂ ಹೇಳುವುದನ್ನು ನಿರಾಕರಿಸಲು ಹೇಗೆ ಸಾಧ್ಯ? ಅಲ್ಲಾಹನು ಸ್ವತಃ ಈ ಹೆಸರನ್ನು ನನಗಾಗಿ ಇಟ್ಟಿರುವಾಗ ನಾನು ಅದನ್ನು ಹೇಗೆ ನಿರಾಕರಿಸುವೆನು? ಅಥವಾ ಅವನ ಹೊರತು ಬೇರೆ ಯಾರಿಗಾದರೂ ಏಕೆ ಹೆದರಬೇಕು? ನನ್ನನ್ನು ಕಳುಹಿಸಿದ ಅಲ್ಲಾಹನ ಹೆಸರಲ್ಲಿ ಹೇಳುತ್ತೇನೆ, ಅವನ ಹೆಸರಲ್ಲಿ ಸುಳ್ಳು ಸೃಷ್ಟಿಸಿ ಹೇಳುವುದು ಶಪಿಸಲ್ಪಟ್ಟವರ ಕೆಲಸವಾಗಿದೆ....... **ನಾನು ಎಲ್ಲೆಲ್ಲ ನುಬುವ್ವತ್ ಮತ್ತು ರಿಸಾಲತ್ ಬಗ್ಗೆ ನಿರಾಕರಿಸಿರುವೆನೋ ಅಲ್ಲೆಲ್ಲ ನಾನು ಸ್ವತಂತ್ರನಾಗಿ ಯಾವುದೇ ಶರೀಅತ್ ತಂದವನಲ್ಲ ಮತ್ತು ನಾನು ಸ್ವತಂತ್ರ ಪ್ರವಾದಿಯೂ ಅಲ್ಲ ಎಂಬ ಅರ್ಥದಲ್ಲಿ ಮಾತ್ರ ನಿರಾಕರಿಸಿದ್ದೇನೆ. ಆದರೆ ನಾನು ಅನುಸರಿಸುತ್ತಿರುವ ಪೈಗಂಬರರಿಂದ(ಸ) ಆಂತರಿಕ ಅನುಗ್ರಹಗಳನ್ನು ಗಳಿಸಿ, ಈ ಹೆಸರನ್ನೂ ತನಗಾಗಿ ಗಳಿಸಿ ಮತ್ತು ಅವರ ಮೂಲಕ ಅಲ್ಲಾಹನಿಂದ ಅದೃಶ್ಯ ಜ್ಞಾನ ಗಳಿಸಿದವನು ಎಂಬ ಅರ್ಥದಲ್ಲಿ ನಾನು ರಸೂಲ್ ಮತ್ತು ನಬಿಯಾಗಿರುವೆನು. ಆದರೆ ಯಾವುದೇ ಹೊಸ ಶರೀಅತ್ ರಹಿತ ನಬಿಯಾಗಿರುವೆನು. ಇಂತಹ ನಬಿಯಾಗಿರುವೆನು ಎಂಬುದರ ಬಗ್ಗೆ ನಾನು ಎಂದೂ ನಿರಾಕರಿಸಲಿಲ್ಲ. ಇದೇ ಅರ್ಥದಲ್ಲಿ ಅಲ್ಲಾಹನು ನನ್ನನ್ನು ನಬಿ ಎಂದೂ ರಸೂಲ್ ಎಂದೂ ಕರೆದಿರುವನು."**

**(ಒಂದು ತಪ್ಪುಗ್ರಹಿಕೆಯ ನಿವಾರಣೆ ಪುಟ 6,7)**

1901ಕ್ಕೆ ಮೊದಲು ಬರೆದ ಲೇಖನಗಳಲ್ಲಿ ಮತ್ತು ಅನಂತರ ಬರೆದ ಲೇಖನಗಳಲ್ಲಿರುವ ವ್ಯತ್ಯಾಸವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಾನು ಬರೆದ ಹಖೀಖತುಲ್ ವಹ್ಯ್ ಎಂಬ ಗ್ರಂಥದಲ್ಲಿ ಸ್ವತಃ ಅಂಗೀಕರಿಸಿದ್ದಾರೆ. ಒಬ್ಬ ವ್ಯಕ್ತಿ ಅವರೊಂದಿಗೆ ಹೀಗೆ ಪ್ರಶ್ನೆ ಕೇಳಿದರು: ತಿರ್‌ಯಾಖಿಲ್ ಖುಲೂಬ್ ಎಂಬ ಗ್ರಂಥದ ಪುಟ 157ರಲ್ಲಿ ಹೀಗೆ ಬರೆಯಲಾಗಿದೆ: "ನಾನು ನನ್ನ ಬರಹದಲ್ಲಿ ಹಝ್ರತ್ ಈಸಾ ಮಸೀಹ್

ಅಲೈಹಿಸ್ಸಲಾಮರಿಗಿಂತ ನನಗೆ ಶ್ರೇಷ್ಠತೆ ನೀಡಿರುವೆನೆಂದು ಯಾರೂ ಸಂದೇಹ ಹೊಂದಬಾರದು. ಏಕೆಂದರೆ ಇದೊಂದು ಆಂಶಿಕ ಶ್ರೇಷ್ಠತೆ ಆಗಿದೆ. ಇಂತಹ ಭಾಗಿಕ ಶ್ರೇಷ್ಠತೆ ನಬಿಯೇತರನಿಗೆ ನಬಿಯ ಮೇಲೆ ಇರಲು ಸಾಧ್ಯವಿದೆ." **(ರೂಹಾನೀ ಖಝಾಇನ್ ಸಂಪುಟ 15 ಪುಟ 481 ತಿರ್‌ಯಾಖುಲ್ ಖುಲೂಬ್).**

ಅನಂತರ ರಿವ್ಯೂ ಪತ್ರಿಕೆ ಸಂಪುಟ 1 ಸಂಚಿಕೆ 6 ಪುಟ 257ರಲ್ಲಿ ಹೀಗೆ ಬರೆಯಲಾಗಿದೆ:

"ಅಲ್ಲಾಹನು ಈ ಸಮುದಾಯದಲ್ಲಿ ಕಳುಹಿಸಿದ ಮಸೀಹ್ ಮೌಊದ್ ಮೊದಲು ಕಳುಹಿಸಲ್ಪಟ್ಟ ಮಸೀಹರಿಗಿಂತ ತನ್ನ ವೈಭವದಲ್ಲಿ ಬಹಳ ಮಿಗಿಲಾಗಿದ್ದಾರೆ.

ಮೇಲಿನ ಎರಡು ಉಲ್ಲೇಖಗಳಲ್ಲಿ ವೈರುಧ್ಯವಿದೆ ಎಂದು ಪ್ರಶ್ನೆ ಕೇಳಿದವರು ಸೂಚಿಸಿದಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಉತ್ತರ ಬರೆದರು:

"ಇದು ಬರಾಹೀನೆ ಅಹ್ಮದಿಯಾ ಗ್ರಂಥದಲ್ಲಿ ಮಸೀಹಿಬ್ನು ಮರ್‌ಯಮ್ ಆಕಾಶದಿಂದ ಇಳಿದು ಬರುವರು ಎಂದು ನಾನು ಬರೆದಿರುವ ಹಾಗೆಯೇ ಇರುವ ಒಂದು ವೈರುಧ್ಯವಾಗಿದೆ. ಆದರೆ ಆಗಮಿಸಲಿರುವ ಮಸೀಹ್ ನಾನೇ ಆಗಿರುವೆನು ಎಂದು ಅನಂತರ ನಾನು ಬರೆದೆನು. ಈ ವೈರುಧ್ಯದ ಕಾರಣವೇನೆಂದರೆ ಬರಾಹೀನೆ ಅಹ್ಮದಿಯಾದಲ್ಲಿ ಪ್ರಕಟಿಸಲಾದ ಅಲ್ಲಾಹನಿಂದ ಗಳಿಸಿದ ಸಂದೇಶವಾಣಿಗಳಲ್ಲಿ ನನ್ನ ಹೆಸರು ಈಸಾ ಎಂದಿರಿಸಲ್ಪಟ್ಟಿದ್ದರೂ ಮತ್ತು 'ನೀನು ಆಗಮಿಸಲಿರುವ ಸಮಾಚಾರವನ್ನು ಅಲ್ಲಾಹನೂ ಅವನ ಸಂದೇಶವಾಹಕನೂ ನೀಡಿರುವರು' ಎಂಬ ಸಂದೇಶವಾಣಿ ದೊರೆತಿದ್ದರೂ ಹಝ್ರತ್ ಈಸಾ ಅಲೈಹಿಸ್ಸಲಾಮ್ ಆಕಾಶದಿಂದ ಇಳಿದು ಬರುವರೆಂದು ಮುಸ್ಲಿಮರ ಒಂದು ಸಮೂಹ ದೃಢವಾಗಿ ನಂಬುತ್ತಾ ಇದ್ದುದರಿಂದ ನಾನು ಸಹ ಹಝ್ರತ್ ಈಸಾ ಆಕಾಶದಿಂದ ಇಳಿದು ಬರುವರೆಂದು ನಂಬಿದ್ದೆನು. ಆದುದರಿಂದ ನಾನು ಅಲ್ಲಾಹನು ನನಗೆ ಅವತೀರ್ಣಗೊಳಿಸಿದ ವಹ್ಯ್‌ಗಳಿಗೆ ಬಾಹ್ಯಾರ್ಥವನ್ನು ನೀಡಲು ಬಯಸಲಿಲ್ಲ ಮತ್ತು ನಾನು ಅಲ್ಲಾಹನ ಈ

ಸಂದೇಶವಾಣಿಯನ್ನು ವ್ಯಾಖ್ಯಾನ ಮಾಡಿದೆನು ಮತ್ತು ಸಾಮಾನ್ಯ ಮುಸ್ಲಿಮರು ನಂಬುವ ರೀತಿಯಲ್ಲಿ ನಂಬುತ್ತಿದ್ದೆನು. ಅದನ್ನೇ ಬರಾಹೀನೆ ಅಹ್ಮದಿಯಾದಲ್ಲಿ ಪ್ರಕಟಿಸಿದೆನು. ಆದರೆ 'ಆಗಮಿಸಲಿರುವ ಮಸೀಹ್ ಮೌಊದ್ ನೀನೇ' ಎಂದು ಅನಂತರ ಇದಕ್ಕೆ ಸಂಬಂಧಿಸಿ ಮಳೆ ಸುರಿಯುವ ಹಾಗೆ ಸಂದೇಶವಾಣಿಗಳು ಅವತೀರ್ಣಗೊಂಡವು.

".......ಇದೇ ರೀತಿಯಲ್ಲಿ, ಮಸೀಹಿಬ್ನು ಮರ್‌ಯಮ್ ಒಬ್ಬ ಪ್ರವಾದಿ ಮತ್ತು ಅಲ್ಲಾಹನ ಸಾಮೀಪ್ಯ ಪಡೆದ ಹಿರಿಯರಲ್ಲಿ ಒಬ್ಬರಾಗಿರುವಾಗ ನನಗೆ ಅವರೊಂದಿಗೆ ಇರುವ ಹೋಲಿಕೆಯಾದರೂ ಏನೆಂದು ಆರಂಭದ ಕಾಲದಲ್ಲಿ ನಾನು ಭಾವಿಸಿದ್ದೆ. ನನ್ನ ಶ್ರೇಷ್ಠತೆಯ ಕುರಿತು ಏನಾದರೂ ಪ್ರಕಟಿಸಲ್ಪಡುವಾಗ ನಾನು ಅದನ್ನು ಆಂಶಿಕವಾದ ಶ್ರೇಷ್ಠತೆ ಎಂದು ಹೇಳುತ್ತಿದ್ದೆ. ಆದರೆ ಅನಂತರ ಅಲ್ಲಾಹನ ಸಂದೇಶವಾಣಿಗಳು ಮಳೆ ಸುರಿಯುವಂತೆ ನನ್ನ ಮೇಲೆ ಅವತೀರ್ಣಗೊಂಡವು. ಅವು ನನ್ನನ್ನು ಆ ನಂಬಿಕೆಯ ಮೇಲೆ ನೆಲೆನಿಲ್ಲಲು ಬಿಡಲಿಲ್ಲ. ನನಗೆ ನಬಿ ಎಂಬ ಬಿರುದು ನೀಡಲ್ಪಟ್ಟಿತು. ಆದರೆ ಅದು ಒಂದು ಪಾರ್ಶ್ವದಲ್ಲಿ ನಬಿ ಮತ್ತೊಂದು ಪಾರ್ಶ್ವದಲ್ಲಿ ಉಮ್ಮತೀ ಎಂಬ ರೀತಿಯಲ್ಲಿ."

**(ಹಖೀಖತುಲ್ ವಹ್ಯ್ ರೂಹಾನೀ ಖಝಾಇನ್ ಸಂಪುಟ 22 ಪುಟ 152–153)**

ಮೇಲಿನ ಉಲ್ಲೇಖದಿಂದ ಸ್ಪಷ್ಟವಾಗುವುದು ಹೀಗೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ನಬಿ ಅಲ್ಲ ಎಂದೂ ಹಝ್ರತ್ ಈಸಾ ಮಸೀಹರನ್ನು ನಬಿ ಎಂದೂ ಭಾವಿಸುತ್ತಿದ್ದರು. ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಶ್ರೇಷ್ಠತೆಯನ್ನು ಆಂಶಿಕ ಶ್ರೇಷ್ಠತೆಯೆಂದು ಭಾವಿಸುತ್ತಿದ್ದರು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಾನು ಸಹ ನಬಿ ಎಂದು ತಿಳಿದಾಗ ಅವರು ತಾನು ಹಝ್ರತ್ ಈಸಾ ಮಸೀಹರಿಗಿಂತ ಎಲ್ಲ ವೈಭವಗಳಲ್ಲೂ ಶ್ರೇಷ್ಠರೆಂದು ಪ್ರಕಟಿಸಿದರು. ಇದೇ ರೀತಿ **ದಾಫಿಉಲ್ ಬಲಾ** ಎಂಬ ಗ್ರಂಥದಲ್ಲಿಯೂ ತನ್ನನ್ನು ಅವರಿಗಿಂತ ಶ್ರೇಷ್ಠನೆಂದು ಪ್ರಕಟಿಸಿದರು.

ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು

1901ಕ್ಕಿಂತ ಮೊದಲು ತಾನು ನಬಿಯಾಗಿರುವ ಬಗ್ಗೆ ನಿರಾಕರಿಸಿದ್ದು ಸಾಮಾನ್ಯವಾಗಿ ಮುಸ್ಲಿಮರು ನಬಿ ಎಂಬ ಪದಕ್ಕೆ ನೀಡುತ್ತಿದ್ದ ಅರ್ಥ ವಿವರಣೆಯ ಕಾರಣದಿಂದಾಗಿತ್ತು. ಮುಸ್ಲಿಮರು ನೀಡುತ್ತಿದ್ದ ಅರ್ಥ ವಿವರಣೆ ಹೀಗೆ: ಶರೀಅತ್ (ಧರ್ಮಸಂಹಿತೆ) ಹೊಸದಾಗಿ ತರುವವನು ಮತ್ತು ತನಗಿಂತ ಮೊದಲಿನ ಶರೀಅತಿನ ಕೆಲವು ಆಜ್ಞೆಗಳನ್ನು ರದ್ದುಪಡಿಸುವವನು ಹಾಗೂ ಹಿಂದಿನ ನಬಿಯ ಉಮ್ಮತಿಗೆ ಸೇರಿದವನೆಂದು ಹೇಳದೆ, ಹಿಂದಿನ ನಬಿಯಿಂದ ಲಾಭ ಪಡೆಯದೆ ಅಲ್ಲಾಹನೊಂದಿಗೆ ನೇರವಾಗಿ ಸಂಬಂಧವಿರಿಸುವವನು ನಬಿಯಾಗಿರುತ್ತಾನೆ. **(1889 ಅಗಸ್ಟ್ 17ರ ಅಲ್‌ಹಕಮ್ ಪತ್ರಿಕೆ ನೋಡಿರಿ)**.

ಮೇಲಿನ ಕಾರಣದಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ 1901ಕ್ಕಿಂತ ಮೊದಲು ತನಗೆ ಅವತೀರ್ಣವಾದ ಸಂದೇಶವಾಣಿಗಳಲ್ಲಿ ತನ್ನ ಬಗ್ಗೆ ಬಳಸಲಾದ ನಬಿ ಪದಕ್ಕೆ ಬಾಹ್ಯಾರ್ಥವನ್ನು ಕೊಡದೆ ವ್ಯಾಖ್ಯಾನ ಮಾಡಿ ಅದಕ್ಕೆ ಮುಹದ್ದಸ್ ಎಂದೂ ಆಂಶಿಕ ನುಬುವ್ವತ್ ಎಂದೂ ಅರ್ಥ ನೀಡುತ್ತಿದ್ದರು. ಆದರೆ ನಬಿಯಾಗಲು ಶರೀಅತ್ ತರುವ ಆವಶ್ಯಕತೆ ಇಲ್ಲ ಮತ್ತು ಶರೀಅತ್ ತಂದ ನಬಿಯ ಅನುಯಾಯಿ ಆಗದೆ ಇರುವ ಆವಶ್ಯಕತೆಯೂ ಇಲ್ಲ ಎಂದು ಅನಂತರ ಅವರಿಗೆ ಮನವರಿಕೆಯಾಯಿತು. ಆಗ ಅವರು ತನ್ನ ಬಗ್ಗೆ ನಬಿ ಎಂಬ ಪದ ಬಳಸಲು ಪ್ರಾರಂಭಿಸಿದರು. ಅವರು ಈ ಪುಸ್ತಕದಲ್ಲಿ ಹೀಗೆ ಬರೆದರು: "ಅಲ್ಲಾಹನಿಂದ ಅದೃಶ್ಯ ಸಮಾಚಾರ ಗಳಿಸುವವನನ್ನು ನಬಿ ಎಂದು ಹೆಸರಿಸದಿದ್ದರೆ ಬೇರೆ ಯಾವ ಹೆಸರಲ್ಲಿ ಕರೆಯಬೇಕು? ಅಂತಹ ವ್ಯಕ್ತಿಗೆ ಮುಹದ್ದಸ್ ಎಂದು ಹೆಸರಿಸಬೇಕು ಎಂದು ಹೇಳುವುದಾದರೆ ನಾನು ಅದಕ್ಕೆ ಪ್ರತಿಯಾಗಿ ಹೇಳುವುದೇನೆಂದರೆ ತಹ್‌ದೀಸ್ ಎಂಬ ಪದಕ್ಕೆ ಯಾವುದೇ ನಿಘಂಟು ಗ್ರಂಥದಲ್ಲಿ ಅದೃಶ್ಯ ಸಮಾಚಾರ ಪ್ರಕಟಣೆ ಎಂದಿಲ್ಲ. ಆದರೆ ನುಬುವ್ವತ್ ಎಂಬ ಪದವು ಅದೃಶ್ಯ ಸಮಾಚಾರಗಳ ಪ್ರಕಟಣೆ ಎಂಬ ಅರ್ಥವನ್ನು ಹೊಂದಿದೆ."

**(ಒಂದು ತಪ್ಪು ಗ್ರಹಿಕೆಯ ನಿವಾರಣೆ ಪುಟ 6)**

ಹಖೀಖತುಲ್ ವಹ್ಯ್ ಎಂಬ ಗ್ರಂಥದ ಉಲ್ಲೇಖದಲ್ಲಿ **"ಆರಂಭದ ಕಾಲದಲ್ಲಿ"** ಎಂದು ಹೇಳಿದ್ದು ತಿರ್‌ಯಾಖುಲ್ ಖುಲೂಬ್ ಎಂಬ ಗ್ರಂಥ

ಬರೆದ ಕಾಲದ ತನಕದ ಕಾಲಘಟ್ಟವಾಗಿದೆ. ಹೀಗೆ 1889ರ ಕೊನೆಯ ಭಾಗದಿಂದ 1901ರ ತನಕದ ಕಾಲಘಟ್ಟದ ನಡುವೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ವಾಸ್ತವಿಕ ವಿವರಣೆಯನ್ನು ಮನವರಿಕೆ ಮಾಡಿಸಿದನು ಎಂದಾಯಿತು. ಅದನ್ನು ಅವರು ಮೊತ್ತಮೊದಲು ಈ ಪುಸ್ತಕದಲ್ಲಿ ಪ್ರಕಟಿಸಿದರು.

"ನನ್ನನ್ನು ಸ್ಪಷ್ಟವಾಗಿ ನಬಿಯೆಂದು ಸಂಬೋಧಿಸಲಾಗಿದೆ" ಎಂದು ಹಖೀಖತುಲ್ ವಹ್ಯ್ ಗ್ರಂಥದಲ್ಲಿ ಬರೆದ ಹಾಗೆಯೇ ಈ ಪುಸ್ತಕದಲ್ಲಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದರು: "ಈಗ ಮುಂಚೆಗಿಂತ ಬಹಳ ಸ್ಪಷ್ಟವಾಗಿ ಈ ಪದಗಳು ನನಗೆ ಅವತೀರ್ಣವಾಗುವ ಸಂದೇಶವಾಣಿಗಳಲ್ಲಿ ಇವೆ." **(ಒಂದು ತಪ್ಪು ಗ್ರಹಿಕೆಯ ನಿವಾರಣೆ ಪುಟ 1)** – ಪದಗಳು ಎಂದರೆ ನಬಿ ಮತ್ತು ರಸೂಲ್ ಎಂಬ ಶಬ್ದಗಳು.

ಈ ಕಿರು ಪುಸ್ತಕವನ್ನು ಪ್ರಕಟಿಸಿದ ನಂತರ ಬರೆದ ತನ್ನ ವಿವಿಧ ಗ್ರಂಥಗಳಲ್ಲಿ ನುಬುವ್ವತ್ ಬಗ್ಗೆ ಈ ಕಿರು ಪುಸ್ತಕದಲ್ಲಿ ಬರೆದ ವಿವರಣೆಗಳನ್ನೇ ಬರೆದಿದ್ದಾರೆ. ಹಖೀಖತುಲ್ ವಹ್ಯ್ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿದ್ದಾರೆ: "ಹೇ, ಅವಿವೇಕಿಗಳೇ, ನುಬುವ್ವತ್ ವಾದದಿಂದ ನಾನು ಉದ್ದೇಶಿಸಿರುವುದು (ನಊಧುಬಿಲ್ಲಾಹ್ – ಹಾಗೆ ಹೇಳುವುದರಿಂದ ಅಲ್ಲಾಹನ ಅಭಯ ಯಾಚಿಸುತ್ತೇನೆ) ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ವಿರುದ್ಧವಾಗಿ ನಿಂತು ನುಬುವ್ವತ್ ವಾದ ಮಾಡುವುದು ಅಲ್ಲ ಅಥವಾ ಯಾವುದಾದರೂ ಹೊಸ ಶರೀಅತ್ ತಂದಿರುವೆನೆಂದೂ ಅಲ್ಲ. ನನಗೆ ದೊರೆತ ನುಬುವ್ವತಿನ ಅರ್ಥ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿದುದರಿಂದ ನನಗೆ ಅತ್ಯಧಿಕವಾಗಿ ದೊರೆತ ದೈವಿಕ ಸಂದೇಶ ವಚನಗಳು ಮತ್ತು ಸಂಬೋಧನೆಗಳು ಮಾತ್ರವಾಗಿವೆ. ದೈವಿಕ ಸಂದೇಶ ವಚನಗಳು ಮತ್ತು ಸಂಬೋಧನೆಗಳ ಬಗ್ಗೆ ನೀವು ಸಹ ಹೇಳುತ್ತಿರುವಿರಿ. ಇಲ್ಲಿ ಕೇವಲ ಶಬ್ದಗಳ ಬಗ್ಗೆ ಜಗಳವಿದೆ. ನೀವು ಯಾವುದನ್ನು **ಮುಕಾಲಮ ವ ಮುಖಾತಬ** (ದೈವಿಕ ಸಂದೇಶ ವಚನಗಳು ಮತ್ತು ಸಂಬೋಧನೆಗಳು) ಎಂದು ಹೇಳುತ್ತೀರೋ

ನಾನು ಅದರ ಆಧಿಕ್ಯವನ್ನು ಅಲ್ಲಾಹನ ಆಜ್ಞೆ ಪ್ರಕಾರವಾಗಿ ನುಬುವ್ವತ್ ಎಂದು ಹೆಸರಿಸುತ್ತೇನೆ. **ಲಿಕುಲ್ಲಿನ್ ಅನ್‌ಯಸ್‌ತಲಿಹ್** (ಪ್ರತಿಯೊಬ್ಬನು ಒಂದು ಸಾಮಾನ್ಯ ಪದವನ್ನು ವಿಶಿಷ್ಟ ಅರ್ಥದಲ್ಲಿ ಬಳಸಬಹುದಾಗಿದೆ). ನನ್ನ ಜೀವ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ – ಅವನೇ ನನ್ನನ್ನು ಕಳುಹಿಸಿರುವನು ಮತ್ತು ಅವನೇ ನನಗೆ ನಬಿ ಎಂಬ ಹೆಸರು ಇರಿಸಿರುವನು. ಅವನೇ ನನ್ನನ್ನು ಮಸೀಹ್ ಮೌಊದ್ ಎಂಬ ಹೆಸರಿನಿಂದ ಕರೆದಿರುವನು."

**(ಹಖೀಖತುಲ್ ವಹ್ಯ್, ರೂಹಾನೀ ಖಝಾಇನ್ ಸಂಪುಟ 22 ಪುಟ 503).**

ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳಲ್ಲಿ ಯಾವುದೇ ಬದಲಾವಣೆ ಆಗಲಿಲ್ಲ. ಅವರ ಯಾವುದೇ ಸಂದೇಶವಾಣಿ (ಇಲ್‌ಹಾಮ್) ಅಥವಾ ಬರವಣಿಗೆ ರದ್ದುಗೊಳಿಸಲ್ಪಡಲಿಲ್ಲ. ಆದರೆ ನುಬುವ್ವತ್ ಬಗ್ಗೆ ಮುಸ್ಲಿಮರಲ್ಲಿ ಪ್ರಚಾರದಲ್ಲಿದ್ದ ಅರ್ಥವನ್ನು ಪರಿಗಣಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಬಿ ಎಂಬ ಪದವನ್ನು ಅದರ ಬಾಹ್ಯ ಅರ್ಥದಿಂದ ವ್ಯಾಖ್ಯಾನಿಸಿ ಮುಹದ್ದಸ್ ಎಂಬ ಅರ್ಥ ನೀಡುತ್ತಿದ್ದರು. ಆದರೆ 1901ರ ನಂತರ ಅಲ್ಲಾಹನು ಅವರಿಗೆ ನುಬುವ್ವತ್ ಪದದ ನೈಜ ಅರ್ಥ ತಿಳಿಸಿಕೊಟ್ಟಾಗ ಮೊದಲು ಹೇಳಿದ್ದನ್ನು ಅಲ್ಲಾಹನ ಆಜ್ಞೆ ಪ್ರಕಾರ ನುಬುವ್ವತ್ ಎಂದು ಹೆಸರಿಸಿದರು ಮತ್ತು ಅದೇ ವಿವರಣೆ ಪ್ರಕಾರ ತನ್ನನ್ನು ನಬಿ ಎಂದು ಘೋಷಿಸಿದರು.

بِسۡمِ اللّٰہِ الرَّحۡمٰنِ الرَّحِیۡمِ

نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಒಂದು ತಪ್ಪುಗ್ರಹಿಕೆಯ ನಿವಾರಣೆ

ನಮ್ಮ ಜಮಾಅತಿಗೆ ಸೇರಿದ ಕೆಲವರಿಗೆ ನಮ್ಮ ವಾದಗಳ ಬಗ್ಗೆ ಮತ್ತು ಸಾಕ್ಷ್ಯಾಧಾರಗಳ ಬಗ್ಗೆ ಕಡಿಮೆ ಪರಿಚಯವಿರುವ ಕಾರಣದಿಂದಲೂ ಅವರಿಗೆ ನಮ್ಮ ಗ್ರಂಥಗಳನ್ನು ಗಮನವಿಟ್ಟು ಅಧ್ಯಯನ ಮಾಡುವ ಸಂದರ್ಭ ಸಿಗದ ಕಾರಣದಿಂದಲೂ ನಮ್ಮೊಂದಿಗೆ ಸಾಕಷ್ಟು ಕಾಲ ಸಹವಾಸ ಮಾಡಿ ತಮ್ಮ ಜ್ಞಾನವನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣದಿಂದಲೂ ಅವರು ಕೆಲವು ಪರಿಸ್ಥಿತಿಗಳಲ್ಲಿ ವಿರೋಧಿಗಳ ಆಕ್ಷೇಪಗಳಿಗೆ ಸಂಪೂರ್ಣವಾಗಿ ವಾಸ್ತವಿಕತೆಗೆ ವಿರುದ್ಧವಾಗಿರುವ ಉತ್ತರವನ್ನು ನೀಡುತ್ತಾರೆ. ಆದುದರಿಂದ ಅವರು ಸತ್ಯವಂತರಾದರೂ ಅವರು ಅಪಮಾನಿತರಾಗುತ್ತಾರೆ. ತಾನು ರಸೂಲ್[1] ಎಂದೂ ನಬಿ[2] ಎಂದೂ ವಾದಿಸುವ ಒಬ್ಬ ವ್ಯಕ್ತಿಗೆ ನೀವು ಬೈಅತ್[3] ಮಾಡಿರುವಿರಿ ಎಂದು ನಮ್ಮ ಜಮಾಅತಿಗೆ ಸೇರಿದ ಒಬ್ಬರೊಡನೆ ಒಬ್ಬ ವಿರೋಧಿ ಕೆಲವು ದಿನಗಳ ಹಿಂದೆ ಆಕ್ಷೇಪ ಸೂಚಿಸಿದನು. ಆಗ ಅದಕ್ಕೆ ನಿರಾಕರಣೆ ರೂಪದಲ್ಲಿ ಉತ್ತರ ನೀಡಲಾಯಿತು. ಆದರೆ ಆ ಉತ್ತರ ಸರಿಯಾಗಿರಲಿಲ್ಲ. ಸತ್ಯವೇನೆಂದರೆ ಅಲ್ಲಾಹನು ತನ್ನ ಪರಿಶುದ್ಧ ವಹ್ಯ್[4] ನನಗೆ ಅವತೀರ್ಣ ಮಾಡಿದ್ದಾನೆ. ಅದರಲ್ಲಿ ರಸೂಲ್, ಮುರ್‌ಸಲ್[5] ಮತ್ತು ನಬಿ ಎಂಬ ಶಬ್ದಗಳಿವೆ. ಈ ಪದಗಳು ಒಮ್ಮೆ ಅಲ್ಲ, ನೂರಾರು ಸಲ ನನಗೆ ಅವತೀರ್ಣವಾಗಿವೆ. ಹೀಗಿರುವಾಗ ಅಂತಹ ಶಬ್ದಗಳು ಇಲ್ಲ ಎಂಬ ಉತ್ತರ ಸರಿಯಾಗಲು ಹೇಗೆ ಸಾಧ್ಯ? ಈಗ ಮುಂಚೆಗಿಂತ ಬಹಳ ಸ್ಪಷ್ಟವಾಗಿ ಈ ಶಬ್ದಗಳು ನನಗೆ ಅವತೀರ್ಣವಾಗುವ ಸಂದೇಶವಾಣಿಗಳಲ್ಲಿ ಇವೆ. ಇಪ್ಪತ್ತೆರಡು ವರ್ಷಗಳ ಹಿಂದೆ ಮುದ್ರಿತವಾದ ಬರಾಹೀನೆ ಅಹ್ಮದಿಯಾದಲ್ಲಿ[6] ಸಹ

1. ಸಂದೇಶವಾಹಕ. 2. ಪ್ರವಾದಿ.

3. ಅಹ್ಮದಿಯಾ ಜಮಾಅತಿಗೆ ಸೇರುವಾಗ ಮಾಡುವ ನಿಷ್ಠೆಯ ಪ್ರತಿಜ್ಞೆ.

4. ಸಂದೇಶವಾಣಿ.

5. ಸಂದೇಶವಾಹಕ.

6. ಈ ಗ್ರಂಥದ ಲೇಖಕನಾದ ಹಝ್ರತ್ ಮಿರ್ಝಾ ಗ್ಶುಲಾಂ ಅಹ್ಮದ್[(ಅ)] ಬರೆದ ಮೊದಲ ಗ್ರಂಥ.

ಈ ಶಬ್ದಗಳು ಧಾರಾಳವಾಗಿ ಇವೆ. ಬರಾಹೀನೆ ಅಹ್ಮದಿಯಾದಲ್ಲಿ ಪ್ರಕಟಿಸಲಾದ ಅಲ್ಲಾಹನ ಸಂದೇಶವಾಣಿಗಳಲ್ಲಿ ಒಂದು ಹೀಗಿದೆ:

هُوَ الَّذِیۡۤ اَرۡسَلَ رَسُوۡلَہٗ بِالۡہُدٰی وَدِیۡنِ الۡحَقِّ لِیُظۡہِرَہٗ عَلَی الدِّیۡنِ کُلِّہٖ

"ಎಲ್ಲ ಧರ್ಮಗಳ ಮೇಲೆ ವಿಜಯ ಸಾಧಿಸಲಿಕ್ಕಾಗಿ ಅವನು ತನ್ನ ಸಂದೇಶವಾಹಕನನ್ನು ಸತ್ಪಥ ದರ್ಶನ ಮತ್ತು ಸತ್ಯ ಧರ್ಮದೊಂದಿಗೆ ನಿಯೋಜಿಸಿದ್ದಾನೆ." **(ಪವಿತ್ರ ಖುರ್‌ಆನ್ 61:10, ಬರಾಹೀನೆ ಅಹ್ಮದಿಯಾ ಪುಟ 498 ನೋಡಿರಿ).**

ಈ ಸಂದೇಶವಾಣಿಯಲ್ಲಿ ವಿನೀತನಾದ ನನ್ನನ್ನು ರಸೂಲ್ ಎಂದು ಕರೆಯಲಾಗಿದೆ. ಇದೇ ಗ್ರಂಥದಲ್ಲಿ ನನ್ನ ಬಗ್ಗೆ ಹೀಗೆ ದೇವಸಂದೇಶವಾಣಿ ಇದೆ:

جَرِیُ اللّٰہِ فِیۡ حُلَلِ الۡاَنۡبِیَاءِ

ಎಂದರೆ, ಅಲ್ಲಾಹನ ಸಂದೇಶವಾಹಕ ಪ್ರವಾದಿಗಳ ಪೋಷಾಕಿನಲ್ಲಿ.

**(ಬರಾಹೀನೆ ಅಹ್ಮದಿಯಾ 504)**

ಮೇಲಿನ ಸಂದೇಶವಾಣಿಯ ಸಮೀಪವೇ ಇನ್ನೊಂದು ಸಂದೇಶವಾಣಿ ಹೀಗಿದೆ:

مُحَمَّدٌ رَّسُوۡلُ اللّٰہِ ؕ وَالَّذِیۡنَ مَعَہٗۤ اَشِدَّآءُ عَلَی الۡکُفَّارِ رُحَمَآءُ بَیۡنَہُمۡ

ಎಂದರೆ, ಮುಹಮ್ಮದ್ ಅಲ್ಲಾಹನ ಸಂದೇಶವಾಹಕ. ಅವರೊಂದಿಗಿರುವವರು ಅವಿಶ್ವಾಸಿಗಳ ವಿರುದ್ಧ ಕಠಿಣರೂ ಪರಸ್ಪರ ದಯಾರ್ದ್ರರೂ ಆಗಿದ್ದಾರೆ.

**(ಪವಿತ್ರ ಖುರ್‌ಆನ್ 48:30, ಬರಾಹೀನೆ ಅಹ್ಮದಿಯಾ ಪುಟ 557 ನೋಡಿರಿ).**

ಈ ಸಂದೇಶವಾಣಿಯಲ್ಲಿ ನನ್ನ ಹೆಸರನ್ನು ಮುಹಮ್ಮದ್ ಎಂದು ಇರಿಸಲಾಗಿದೆ ಮತ್ತು ರಸೂಲುಲ್ಲಾಹ್ ಎಂದು ಸಹ ಹೇಳಲಾಗಿದೆ.

ಬರಾಹೀನೆ ಅಹ್ಮದಿಯಾ ಪುಟ 557ರಲ್ಲಿ 'ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆ ನೀಡುವವನು ಆಗಮಿಸಿದನು' ಎಂದಿದೆ.) ಈ ಸಂದೇಶವಾಣಿಯ ಇನ್ನೊಂದು ಪಾಠ ಹೀಗಿದೆ: 'ಲೋಕದಲ್ಲಿ ಒಬ್ಬ ಪ್ರವಾದಿ (ನಬಿ) ಆಗಮಿಸಿದನು.'

ಇದೇ ರೀತಿ ಬರಾಹೀನೆ ಅಹ್ಮದಿಯಾದಲ್ಲಿ ಅನೇಕ ಸ್ಥಳಗಳಲ್ಲಿ ವಿನೀತನಾದ ನನ್ನನ್ನು ರಸೂಲ್ ಎಂದು ಕರೆಯಲಾಗಿದೆ.

ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ (ಪ್ರವಾದಿಗಳ ಮುದ್ರೆ, ಪ್ರವಾದಿಗಳಲ್ಲಿ ಶ್ರೇಷ್ಠರು.) ಆಗಿರುವಾಗ ಅವರ ನಂತರ ಬೇರೆ ನಬಿ ಬರುವುದು ಹೇಗೆ ಎಂದು ಯಾರಾದರೂ ಪ್ರಶ್ನಿಸುವರಾದರೆ, ಅದಕ್ಕಿರುವ ಉತ್ತರ ಹೀಗಿದೆ: ಹಾಗಾದರೆ, ನಿಸ್ಸಂಶಯವಾಗಿಯೂ ಹಳೆಯ ಅಥವಾ ಹೊಸ ನಬಿ ಬರುವಂತಿಲ್ಲ. ಆದರೆ ಕೊನೆಗಾಲದಲ್ಲಿ ಹಝ್ರತ್ ಈಸಾ ಅಲೈಹಿಸ್ಸಲಾಮರು ಇಳಿಯುವರು ಎಂದು ನೀವು ಹೇಳುತ್ತೀರಿ. ಮಾತ್ರವಲ್ಲ ಅವರನ್ನು ನಬಿಯೆಂದೂ ಅವರಿಗೆ ನಲ್ವತ್ತು ವರ್ಷಗಳ ಕಾಲ ದಿವ್ಯವಾಣಿ ಲಭಿಸುವುದೆಂದೂ ಅವರ ಪ್ರವಾದಿತ್ವ ಕಾಲವು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಹೆಚ್ಚಾಗಿರುವುದೆಂದೂ ನೀವು ನಂಬುತ್ತಿದ್ದೀರಿ. ಇಂತಹ ನಂಬಿಕೆ ನಿಸ್ಸಂಶಯವಾಗಿಯೂ ಪಾಪವಾಗಿದೆ ಮತ್ತು

وَلٰكِنْ رَّسُوْلَ اللّٰهِ وَخَاتَمَ النَّبِيّٖنَ

ಎಂಬ ಪವಿತ್ರ ಖುರ್‌ಆನ್ ವಚನ[7] ಮತ್ತು

لَا نَبِيَّ بَعْدِيْ

ಎಂಬ ಹದೀಸಿಗೆ[8] ವಿರುದ್ಧವಾಗಿದೆ. ಆದರೆ ನಾವು ಇಂತಹ ವಿಶ್ವಾಸದ ಕಠಿಣ ವಿರೋಧಿಗಳಾಗಿದ್ದೇವೆ ಮತ್ತು

وَلٰكِنْ رَّسُوْلَ اللّٰهِ وَخَاتَمَ النَّبِيّٖنَ

ಎಂಬ ಪವಿತ್ರ ಖುರ್‌ಆನ್[7] ವಚನದ ಬಗ್ಗೆ ಪರಿಪೂರ್ಣ ನಂಬಿಕೆ ಹೊಂದಿದ್ದೇವೆ. ಈ ವಚನದಲ್ಲಿ ಒಂದು ಭವಿಷ್ಯವಾಣಿ ಇದೆ. ಅದರ ಬಗ್ಗೆ ನಮ್ಮ ವಿರೋಧಿಗಳಿಗೆ ಗೊತ್ತಿಲ್ಲ. ಅದೇನೆಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಭವಿಷ್ಯವಾಣಿಗಳ ಬಾಗಿಲು ಕೊನೆಗಾಲದ ತನಕ ಮುಚ್ಚಲಾಗಿದೆ. ಈಗ ಯಾವುದೇ ಹಿಂದು, ಕ್ರೈಸ್ತ, ಯಹೂದಿ ಅಥವಾ ನಾಮಮಾತ್ರ ಮುಸ್ಲಿಮನು ತನ್ನ ಬಗ್ಗೆ ನಬಿ ಎಂಬ ಪದವನ್ನು ಸಾಬೀತುಗೊಳಿಸಲು ಸಾಧ್ಯವಲ್ಲ. ಪ್ರವಾದಿತ್ವದ ಎಲ್ಲ ಬಾಗಿಲು

7. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ. **(33:41)**

8. ನನ್ನ ನಂತರ ಪ್ರವಾದಿಯಿಲ್ಲ. (**ಬುಖಾರಿ ಕಿತಾಬುಲ್ ಫಝಾಇಲ್, ಬಾಬು ಫಝಾಇಲಿ ಅಲಿ ಬಿನ್ ಅಬೀ ತಾಲಿಬ್**)

ಮುಚ್ಚಲ್ಪಟ್ಟಿವೆ. ಆದರೆ ಸೀರತ್ ಸಿದ್ದೀಖೀಯದ (ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದರಿಂದ ದೊರಕುವ) ನುಬುವ್ವತಿನ ಬಾಗಿಲು ತೆರೆದಿದೆ. ಅದು ಹಝ್ರತ್ ಪೈಗಂಬರರಲ್ಲಿ[ಸ] ತಲ್ಲೀನನಾಗುವ ಮೂಲಕ ದೊರಕುವ ಪದವಿಯಾಗಿದೆ. ಯಾರು ಈ ಬಾಗಿಲು ಮೂಲಕ ಅಲ್ಲಾಹನ ಬಳಿಗೆ ಬರುತ್ತಾನೋ ಅವನ ಮೇಲೆ ಝಿಲ್ಲೀ (ನೆರಳಿನ) ರೂಪದಲ್ಲಿ ಅದೇ ನುಬುವ್ವತ್ತಿನ ಚಾದರ ಹೊದಿಸಲ್ಪಡುತ್ತದೆ. ಅದು ಮುಹಮ್ಮದೀ ನುಬುವ್ವತಿನ ಚಾದರವಾಗಿದೆ. ಆದುದರಿಂದ ಅಂತಹ ವ್ಯಕ್ತಿ ನಬಿಯಾಗುವುದರಿಂದ ಹಝ್ರತ್ ಪೈಗಂಬರರ[ಸ] ಸ್ಥಾನಮಾನ ಕುಂಠಿತಗೊಳ್ಳುವುದಿಲ್ಲ. ಏಕೆಂದರೆ ಅವನು ತನ್ನಿಂದ ಅಲ್ಲ ಹಝ್ರತ್ ಪೈಗಂಬರರ[ಸ] ಕಾರಂಜಿಯಿಂದ ಪ್ರವಾದಿತ್ವವನ್ನು ಪಡೆಯುತ್ತಾನೆ. ಅದು ಕೂಡ ತನಗೋಸ್ಕರವಲ್ಲ, ಆ ಪೈಗಂಬರರ[ಸ] ವೈಭವಕ್ಕೋಸ್ಕರವಾಗಿದೆ. ಆದುದರಿಂದ ಅಂತಹ ವ್ಯಕ್ತಿಯ ಹೆಸರು ಆಕಾಶದಲ್ಲಿ ಮುಹಮ್ಮದ್ ಎಂದೂ ಅಹ್ಮದ್ ಎಂದೂ ಆಗಿದೆ. ಇದರ ಅರ್ಥವೇನೆಂದರೆ, ಮುಹಮ್ಮದರ[ಸ] ನುಬುವ್ವತ್ ತದ್‌ರೂಪದಲ್ಲಿ ಮುಹಮ್ಮದರಿಗೇ[ಸ] ಕೊನೆಗೆ ಲಭಿಸಿತು; ಬೇರೆ ಯಾರಿಗೂ ಲಭಿಸಲಿಲ್ಲ. ಆದುದರಿಂದ

مَا كَانَ مُحَمَّدٌ اَبَآ اَحَدٍ مِّنْ رِّجَالِكُمْ وَلٰكِنْ رَّسُوْلَ اللّٰهِ وَخَاتَمَ النَّبِيّٖنَ ؕ وَكَانَ اللّٰهُ بِكُلِّ شَيْءٍ عَلِيْمًا

ಎಂಬುದನ್ನು[9] ಹೀಗೆ ವ್ಯಾಖ್ಯಾನಿಸಬಹುದು:

لَيْسَ مُحَمَّدٌ اَبَا اَحَدٍ مِّنْ رِّجَالِ الدُّنْيَا وَلٰكِنْ هُوَ اَبٌ لِرِجَالِ الْاٰخِرَةِ لِاَنَّهٗ خَاتَمُ النَّبِيّٖنَ
وَلَا سَبِيْلَ اِلٰى فُيُوْضِ اللّٰهِ مِنْ غَيْرِ تَوَسُّطِهٖ -

ಎಂದರೆ, ಮುಹಮ್ಮದ್ ಲೋಕದ ಪುರುಷರಲ್ಲಿ ಯಾರ ಪಿತನೂ ಅಲ್ಲ. ಆದರೆ ಅವರು ಪರಲೋಕದ ಪುರುಷರ ಪಿತನಾಗಿದ್ದಾರೆ ಮತ್ತು ಖಾತಮುನ್ನಬಿಯ್ಯೀನ್ ಆಗಿರುವರು. ಅಲ್ಲಾಹನ ಅನುಗ್ರಹ ಗಳಿಸಲು ಅವರ ಮೂಲಕ ಹೊರತು ಅನ್ಯಮಾರ್ಗ ಯಾವುದೂ ಇಲ್ಲ.

ನನ್ನ ನುಬುವ್ವತ್ (ಪ್ರವಾದಿತ್ವ) ಮತ್ತು ರಿಸಾಲತ್ (ಸಂದೇಶವಾಹಕತ್ವ) ನಾನು ಮುಹಮ್ಮದ್ ಮತ್ತು ಅಹ್ಮದ್ ಆಗಿರುವ ಕಾರಣದಿಂದಾಗಿದೆ. ಅದು ನನ್ನ ಸ್ವಂತ ಕಾರಣದಿಂದ ಲಭಿಸಿದುದಲ್ಲ. ಅದು ನಾನು ನನ್ನನ್ನು ಹಝ್ರತ್

9. ಮುಹಮ್ಮದ್ ನಿಮ್ಮ ಪೈಕಿ ಯಾವನೇ ಪುರುಷನ ಪಿತ ಅಲ್ಲ. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ. **(33:41)**

ಪೈಗಂಬರರಲ್ಲಿ(ಸ) ತಲ್ಲೀನನ್ನಾಗಿ ಮಾಡಿದುದರಿಂದ ಲಭಿಸಿದುದಾಗಿದೆ. ಆ ಕಾರಣದಿಂದ ಅವರ ಖಾತಮುನ್ನಬಿಯ್ಯೀನ್ ಸ್ಥಾನಕ್ಕೆ ಭಂಗವುಂಟಾಗಲಿಲ್ಲ. ಆದರೆ ಹಝ್ರತ್ ಈಸಾ ಅಲೈಹಿಸ್ಸಲಾಮ್ ಸ್ವತಃ ಇಳಿದು ಬರುವರಾದರೆ ಖಂಡಿತವಾಗಿಯೂ ಹಝ್ರತ್ ಪೈಗಂಬರರ(ಸ) ಸ್ಥಾನಕ್ಕೆ ಭಂಗವುಂಟಾಗುವುದು. ನಿಘಂಟುವಿನ ಪ್ರಕಾರ ನಬಿ ಎಂಬುದರ ಅರ್ಥ ಅಲ್ಲಾಹನ ಕಡೆಯಿಂದ ಅದೃಶ್ಯವಾದ ಅರಿವನ್ನು ಪಡೆದು ತಿಳಿಸುವವನು ಎಂದಾಗಿದೆ. ಆದ್ದರಿಂದ ಯಾರಲ್ಲಿ ಈ ಅರ್ಥವು ಸರಿಹೊಂದುತ್ತದೋ ಅವನು ನಬಿಯಾಗಿರುತ್ತಾನೆ. ಆ ನಬಿಯು ರಸೂಲ್ ಸಹ ಆಗುವುದು ಅದರ ಶರತ್ತಾಗಿದೆ. ಏಕೆಂದರೆ ರಸೂಲ್ ಆಗದಿದ್ದರೆ ಪರಿಶುದ್ಧವಾದ ಅದೃಶ್ಯ ಸಮಾಚಾರಗಳು ಲಭಿಸಲಾರವು. ಪವಿತ್ರ ಖುರ್‌ಆನಿನ ಈ ವಚನ ನೋಡಿರಿ:

عٰلِمُ الْغَيْبِ فَلَا يُظْهِرُ عَلٰى غَيْبِهٖٓ اَحَدًا ○ اِلَّا مَنِ ارْتَضٰى مِنْ رَّسُوْلٍ -

ಎಂದರೆ, ಅವನು ತನ್ನ ರಹಸ್ಯಗಳನ್ನು ಯಾರಿಗೂ ಬಹಿರಂಗಪಡಿಸುವುದಿಲ್ಲ. ಅವನು ಮೆಚ್ಚುವ ತನ್ನ ಸಂದೇಶವಾಹಕನಿಗೆ ಹೊರತು.

**(ಪವಿತ್ರ ಖುರ್‌ಆನ್ 72:27, 28)**

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಈ ಅರ್ಥದಲ್ಲಿ ಪ್ರವಾದಿ ಆಗಮಿಸುವುದನ್ನು ನಿರಾಕರಿಸುವುದಾದರೆ, ಈ ಸಮುದಾಯಕ್ಕೆ ದೈವಿಕ ಸಂದೇಶವಾಣಿ ಲಭಿಸದು ಎಂದು ನಂಬಬೇಕಾಗುತ್ತದೆ. ಏಕೆಂದರೆ ಯಾರಿಗೆ ಅಲ್ಲಾಹನ ಸಂದೇಶವಾಣಿ ಲಭಿಸುವುದೋ ಆ ವ್ಯಕ್ತಿ

لَا يُظْهِرُ عَلٰى غَيْبِهٖٓ اَحَدًا

(ಎಂದರೆ, ಅವನು ತನ್ನ ರಹಸ್ಯಗಳನ್ನು ಯಾರಿಗೂ ಬಹಿರಂಗಪಡಿಸುವುದಿಲ್ಲ.... ತನ್ನ ಸಂದೇಶವಾಹಕನಿಗೆ ಹೊರತು – **72:27**) ಎಂಬ ವಚನ ಪ್ರಕಾರ ನಬಿಯಾಗಿರುತ್ತಾನೆ. ಅದೇ ರೀತಿಯಲ್ಲಿ ಅಲ್ಲಾಹನ ಕಡೆಯಿಂದ ಕಳುಹಿಸಲ್ಪಟ್ಟವನನ್ನು ರಸೂಲ್ ಅಥವಾ ಸಂದೇಶವಾಹಕ ಎಂದು ಕರೆಯಲಾಗುತ್ತದೆ. ನಮ್ಮ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಗಮಿಸಿದ ನಂತರ ಕೊನೆಗಾಲದ ತನಕ ಹೊಸ ಶರೀಅತ್[10] ತರುವ ನಬಿ ಆಗಮಿಸಲಾರರು ಮತ್ತು ಅವರ ಮೂಲಕ, ಅವರಲ್ಲಿ ತಲ್ಲೀನನಾಗುವ ಮೂಲಕ, ಆಕಾಶದಲ್ಲಿ ಮುಹಮ್ಮದ್ ಮತ್ತು ಅಹ್ಮದ್ ಎಂಬ

10. ಧರ್ಮಸಂಹಿತೆ.

ಹೆಸರು ಗಳಿಸುವ ಮೂಲಕ ನುಬುವ್ವತ್ ಲಭಿಸುವುದು. ತಾನಾಗಿಯೇ ನುಬುವ್ವತ್ ಲಭಿಸಲಾರದು. ಹಾಗೆ ಲಭಿಸಿತೆಂದು ವಾದಿಸುವವನು ಅವಿಶ್ವಾಸಿಯಾಗಿದ್ದಾನೆ.

ಖಾತಮುನ್ನಬಿಯ್ಯೀನ್ ಶಬ್ದ ಆವಶ್ಯಪಡುವುದೇನೆಂದರೆ, ಯಾವನಾದರೂ ಅನ್ಯತೆ[11] ಇರುವ ಸ್ಥಿತಿಯಲ್ಲಿ ನುಬುವ್ವತ್ ವಾದ ಮಾಡುವನಾದರೆ ಅವನು ಪ್ರವಾದಿತ್ವದ ಮುದ್ರೆಯನ್ನು ಭಂಗಪಡಿಸುವವನಾಗುತ್ತಾನೆ. ಆದರೆ ಒಬ್ಬನು ಖಾತಮುನ್ನಬಿಯ್ಯೀನರಲ್ಲಿ ತನ್ನನ್ನು ಅರ್ಪಿಸಿ ಅವನು ಅವರಲ್ಲಿ ಐಕ್ಯ ಹೊಂದಿ ಅನ್ಯತೆಯ ಯಾವ ಚಿಹ್ನೆಯೂ ಇಲ್ಲದವನಾಗಿ ಅವರದೇ ಹೆಸರು ಪಡೆಯುತ್ತಾನೆ. ಸ್ವಚ್ಛ ಕನ್ನಡಿಯ ಹಾಗೆ ಮುಹಮ್ಮದೀ ಮುಖ ಅವರಲ್ಲಿ ಪ್ರತಿಬಿಂಬಿಸುತ್ತದೆ. ಅಂತಹ ವ್ಯಕ್ತಿಯು (ಪ್ರವಾದಿತ್ವದ) ಮುದ್ರೆಯನ್ನು ಮುರಿಯದೆ ನಬಿಯಾಗಿರುತ್ತಾನೆ. ಏಕೆಂದರೆ ಅವನು ಝಿಲ್ಲೀ (ನೆರಳು, ಪ್ರತಿಬಿಂಬ) ರೂಪದಲ್ಲಿ ಮುಹಮ್ಮದ್ ಆಗುತ್ತಾನೆ. ಇಂತಹ ವ್ಯಕ್ತಿ ನುಬುವ್ವತಿನ ವಾದ ಮಾಡಿದರೆ ಅವನ ಹೆಸರು ಝಿಲ್ಲೀ (ನೆರಳಿನ) ರೂಪದಲ್ಲಿ ಮುಹಮ್ಮದ್ ಮತ್ತು ಅಹ್ಮದ್ ಆಗಿರುತ್ತದೆ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಖಾತಮುನ್ನಬಿಯ್ಯೀನ್ ಸ್ಥಾನಕ್ಕೆ ಕುಂದುಂಟಾಗುವುದಿಲ್ಲ. ಏಕೆಂದರೆ ಈ ಎರಡನೇ ಮುಹಮ್ಮದ್ ಆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದ್ದೇ ಚಿತ್ರ ಮತ್ತು ಅವರದ್ದೇ ಹೆಸರಾಗಿದೆ. ಆದರೆ ಹಝ್ರತ್ ಈಸಾ ಅಲೈಹಿಸ್ಸಲಾಮ್ ಖಾತಮುನ್ನಬಿಯ್ಯೀನ್ ಎಂಬ ಮುದ್ರೆಯನ್ನು ಮುರಿಯದೆ ಬರಲು ಸಾಧ್ಯವಿಲ್ಲ. ಏಕೆಂದರೆ ಅವರ ನುಬುವ್ವತ್ ಬೇರೆಯೇ ನುಬುವ್ವತ್ ಆಗಿದೆ. ಆದರೆ ಬರೂಝಿಯಾಗಿ (ತದ್ರೂಪಿಯಾಗಿ) ಯಾರೂ ನಬಿ ಮತ್ತು ರಸೂಲ್ ಆಗಲು ಸಾಧ್ಯವಿಲ್ಲವಾದರೆ

اِهۡدِنَا الصِّرَاطَ الۡمُسۡتَقِيۡمَ ○ صِرَاطَ الَّذِيۡنَ اَنۡعَمۡتَ عَلَيۡهِمۡ -

ಎಂಬ ವಚನದ[12] ಅರ್ಥವಾದರೂ ಏನು?* ಆದುದರಿಂದ ನೆನಪಿಡಬೇಕಾದುದು

11. ಹಝ್ರತ್ ಪೈಗಂಬರರ(ಸ) ಮತ್ತು ವಾದಿಸುವವನ ನಡುವೆ ಅನ್ಯತೆ, ಭಿನ್ನತೆ.

12. ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ ಮಾರ್ಗದಲ್ಲಿ. **(ಪವಿತ್ರ ಖುರ್‌ಆನ್ 1:6,7)**

* ನೀವು ನೆನಪಿಟ್ಟುಕೊಳ್ಳಿರಿ. ಹಿಂದಿನ ಪ್ರವಾದಿಗಳು ಮತ್ತು ಸಿದ್ದೀಖ್‌ಗಳು ಗಳಿಸಿದ ಬಹುಮಾನ ಗಳಲ್ಲಿ ಪ್ರತಿಯೊಂದು ಈ ಉಮ್ಮತಿಗೆ (ಸಮುದಾಯಕ್ಕೆ) ದೊರಕುವುದು ಎಂದು ವಾಗ್ದಾನ

ಏನೆಂದರೆ, ಈ ಅರ್ಥಗಳ ಪ್ರಕಾರ ನನಗೆ ನುಬುವ್ವತ್ (ಪ್ರವಾದಿತ್ವ) ಮತ್ತು ರಿಸಾಲತ್ (ಸಂದೇಶವಾಹಕತ್ವ) ಬಗ್ಗೆ ನಿರಾಕರಣೆ ಇಲ್ಲ. ಇದೇ ಅರ್ಥದಲ್ಲಿ ಸಹೀಹ್ ಮುಸ್ಲಿಮ್‌ನಲ್ಲಿಯೂ[13] ಮಸೀಹ್ ಮೌಊದರ ಹೆಸರನ್ನು ನಬಿ ಎಂದು ಇರಿಸಲಾಗಿದೆ. ಅಲ್ಲಾಹನಿಂದ ಅದೃಶ್ಯ ಸಮಾಚಾರ ಗಳಿಸುವವನನ್ನು ನಬಿ ಎಂದು ಹೆಸರಿಸದಿದ್ದರೆ ಬೇರೆ ಯಾವ ಹೆಸರಲ್ಲಿ ಕರೆಯಬೇಕು? ಅಂತಹ ವ್ಯಕ್ತಿಗೆ ಮುಹದ್ದಸ್ ಎಂದು ಹೆಸರಿಸಬೇಕು ಎಂದು ಹೇಳುವುದಾದರೆ ನಾನು ಅದಕ್ಕೆ ಪ್ರತಿಯಾಗಿ ಹೇಳುವುದೇನೆಂದರೆ, ತಹ್‌ದೀಸ್ ಎಂಬ ಪದಕ್ಕೆ ಯಾವುದೇ ನಿಘಂಟು ಗ್ರಂಥದಲ್ಲಿ ಅದೃಶ್ಯ ಸಮಾಚಾರ ಪ್ರಕಟಣೆ ಎಂದಿಲ್ಲ. ಆದರೆ ನುಬುವ್ವತ್ ಎಂಬ ಪದವು ಅದೃಶ್ಯ ಸಮಾಚಾರಗಳ ಪ್ರಕಟಣೆ ಎಂಬ ಅರ್ಥವನ್ನು ಹೊಂದಿದೆ. ನಬಿ ಎಂಬ ಪದವನ್ನು ಅರಬಿಯಲ್ಲೂ ಹೀಬ್ರೂ ಭಾಷೆಯಲ್ಲೂ ಒಂದೇ ಅರ್ಥದಲ್ಲಿ ಉಪಯೋಗಿಸಲಾಗುತ್ತದೆ. ಹೀಬ್ರೂ ಭಾಷೆಯಲ್ಲಿ ಈ ಶಬ್ದವನ್ನು ನಾಬಿ ಎಂದು ಹೇಳುತ್ತಾರೆ. ಇದು ನಾಬಾ ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ. ದೇವನಿಂದ ಸಮಾಚಾರ ಗಳಿಸಿ ಭವಿಷ್ಯವಾಣಿ ಹೇಳುವುದು ಎಂದಾಗಿದೆ ಅದರ ಅರ್ಥ. ನಬಿಯಾಗಲು ಶರೀಅತ್ ತರಬೇಕೆಂಬ ಶರತ್ತು ಇಲ್ಲ. ನುಬುವ್ವತ್ ಒಂದು ವರದಾನವಾಗಿದೆ. ಅದರ ಮೂಲಕ ನೀಡಲಾಗಿದೆ. ಈ ವರದಾನಗಳಲ್ಲಿ ಹಿಂದಿನ ಪ್ರವಾದಿಗಳಿಗೆ ಲಭಿಸಿದ ಅದೃಶ್ಯ ಜ್ಞಾನಗಳೂ ಭವಿಷ್ಯವಾಣಿಗಳೂ ಒಳಪಟ್ಟಿವೆ. ಆ ಕಾರಣದಿಂದಲೇ ಅವರು ನಬಿ ಎಂದು ಕರೆಯಲ್ಪಟ್ಟರು. ಆದರೆ ನಬಿ ಮತ್ತು ರಸೂಲರ ಹೊರತು ಅನ್ಯರಿಗೆ ಪವಿತ್ರ ಖುರ್‌ಆನ್ ಅದೃಶ್ಯ ಸಮಾಚಾರದ ಬಾಗಿಲು ಮುಚ್ಚುತ್ತದೆ. لَا يُظْهِرُ عَلٰى غَيْبِهٖٓ اَحَدًا ○ اِلَّا مَنِ ارْتَضٰى مِنْ رَّسُوْلٍ – "ಅವನು ತನ್ನ ರಹಸ್ಯಗಳನ್ನು ಯಾರಿಗೂ ಬಹಿರಂಗಪಡಿಸುವುದಿಲ್ಲ" – ಅವನು ಮೆಚ್ಚುವ ತನ್ನ ಸಂದೇಶವಾಹಕನಿಗೆ ಹೊರತು" **(ಪವಿತ್ರ ಖುರ್‌ಆನ್ 72: 27,28)** ಎಂಬ ಪವಿತ್ರ ಖುರ್‌ಆನಿನ ವಚನ ಇದನ್ನೇ ಸೂಚಿಸುತ್ತದೆ. ಆದ್ದರಿಂದ ಪರಿಶುದ್ಧವಾದ ಅದೃಶ್ಯ ಜ್ಞಾನವನ್ನು ಅರಿಯಲು ನಬಿ ಆಗುವುದು ಆವಶ್ಯಕವಾಗಿದೆ ಎಂಬುದು ಸ್ಪಷ್ಟ. ಈ ಪರಿಶುದ್ಧ ಅದೃಶ್ಯ ಸಮಾಚಾರ ಗಳಿಸುವುದರಿಂದ ಈ ಸಮುದಾಯ ವಂಚಿತವಾಗಲಾರದು ಎಂದು اَنْعَمْتَ عَلَيْهِمْ – 'ನಿನ್ನ ಅನುಗ್ರಹಕ್ಕೆ ಪಾತ್ರರಾದವರ' **(ಪವಿತ್ರ ಖುರ್‌ಆನ್ 1:7)** ಎಂಬ ವಚನ ಸೂಚಿಸುತ್ತದೆ. ಮೇಲೆ ಉಲ್ಲೇಖಿಸಿದ ಪವಿತ್ರ ಖುರ್‌ಆನ್ ವಚನ ಪ್ರಕಾರ ಪರಿಶುದ್ಧವಾದ ಅದೃಶ್ಯ ಜ್ಞಾನವನ್ನು ಗಳಿಸಲು ನುಬುವ್ವತ್ ಮತ್ತು ರಿಸಾಲತ್ ಅವಶ್ಯ. ಆದರೆ ಅದನ್ನು ನೇರವಾಗಿ ಗಳಿಸುವ ವಿಧಾನ ಕೊನೆಗೊಂಡಿದೆ. ಆದುದರಿಂದ ಈ ವರದಾನವನ್ನು ಪ್ರತಿರೂಪವಾಗಿಯೂ ನೆರಳಿನ ರೂಪದಲ್ಲಿಯೂ ಪೈಗಂಬರರಲ್ಲಿ(ಸ) ತಲ್ಲೀನನಾಗಿಯೂ ಮಾತ್ರ ಗಳಿಸಬಹುದಾಗಿದೆ. ಕೇವಲ ಆ ಮಾರ್ಗ ತೆರೆದಿದೆ. ಇದರ ಬಗ್ಗೆ ಚಿಂತಿಸಿರಿ.

13. ಒಂದು ಹದೀಸ್ ಗ್ರಂಥದ ಹೆಸರು.

ಅದೃಶ್ಯ ಜ್ಞಾನಗಳು ತೆರೆಯಲ್ಪಡುತ್ತವೆ. ನಾನು ಈ ಕಾಲದ ತನಕ ಅಂದಾಜು ನೂರೈವತ್ತು ಭವಿಷ್ಯವಾಣಿಗಳನ್ನು ಅಲ್ಲಾಹನಿಂದ ಪಡೆದು ಅವು ಸ್ಪಷ್ಟವಾಗಿ ಈಡೇರಿದುದಾಗಿ ಕಣ್ಣಾರೆ ಕಂಡಿರುವೆನು. ಹೀಗಿರುವಾಗ ನಾನು ನನ್ನ ಬಗ್ಗೆ ನಬಿ ಎಂದೂ ರಸೂಲ್ ಎಂದೂ ಹೇಳುವುದನ್ನು ನಿರಾಕರಿಸಲು ಹೇಗೆ ಸಾಧ್ಯ? ಅಲ್ಲಾಹನು ಸ್ವತಃ ಈ ಹೆಸರನ್ನು ನನಗಾಗಿ ಇಟ್ಟಿರುವಾಗ ನಾನು ಅದನ್ನು ಹೇಗೆ ನಿರಾಕರಿಸುವುದು? ಅಥವಾ ಅವನ ಹೊರತು ಬೇರೆ ಯಾರಿಗಾದರೂ ಏಕೆ ಹೆದರಬೇಕು? ನನ್ನನ್ನು ಕಳುಹಿಸಿದ ಅಲ್ಲಾಹನ ಹೆಸರಲ್ಲಿ ಹೇಳುತ್ತೇನೆ, ಅವನ ಹೆಸರಲ್ಲಿ ಸುಳ್ಳು ಸೃಷ್ಟಿಸಿ ಹೇಳುವುದು ಶಪಿಸಲ್ಪಟ್ಟವರ ಕೆಲಸವಾಗಿದೆ. ಅಲ್ಲಾಹನಾಣೆ, ಅವನೇ ನನ್ನನ್ನು ಮಸೀಹ್ ಮೌಊದ್[14] ಆಗಿ ಕಳುಹಿಸಿರುವನು. ನಾನು ಪವಿತ್ರ ಖುರ್‌ಆನಿನ ವಚನಗಳನ್ನು ನಂಬುವ ಹಾಗೆಯೇ ಸ್ವಲ್ಪವೂ ವ್ಯತ್ಯಾಸವಿಲ್ಲದೆ ನನಗೆ ಅಲ್ಲಾಹನಿಂದ ಲಭಿಸಿದ ವಹ್ಯ್ (ಸಂದೇಶವಾಣಿ)ಯನ್ನು ನಂಬುತ್ತೇನೆ. ಅದರ ಸತ್ಯತೆ ಅದರ ನಿರಂತರ ದೃಷ್ಟಾಂತಗಳ ಮೂಲಕ ನನಗೆ ಸ್ಪಷ್ಟವಾಗಿ ತಿಳಿದಿದೆ. ನನಗೆ ಅವತೀರ್ಣಗೊಂಡ ಪರಿಶುದ್ಧ ದಿವ್ಯವಚನಗಳು ಅದೇ ಅಲ್ಲಾಹನ ವಚನಗಳಾಗಿವೆ ಎಂದು ಹಝ್ರತ್ ಮೂಸಾ, ಹಝ್ರತ್ ಈಸಾ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತನ್ನ ವಚನಗಳನ್ನು ಅವತೀರ್ಣಗೊಳಿಸಿದ ಅಲ್ಲಾಹನ ಹೆಸರಲ್ಲಿ ನಾನು ಬೈತುಲ್ಲಾಹ್ ಆದ ಕಅಬದಲ್ಲಿ ನಿಂತು ಆಣೆಹಾಕಿ ಹೇಳಬಲ್ಲೆನು. ನನ್ನ ಪರವಾಗಿ ಭೂಮಿಯೂ ಸಾಕ್ಷಿ ಹೇಳಿದೆ; ಆಕಾಶವೂ ಸಾಕ್ಷಿ ಹೇಳಿದೆ. ಹೀಗೆ ನಾನು ಖಲೀಫತುಲ್ಲಾಹ್[15] ಎಂದು ನನಗೋಸ್ಕರ ಆಕಾಶವೂ ಭೂಮಿಯೂ ಹೇಳಿವೆ. ಆದರೆ ಭವಿಷ್ಯವಾಣಿಗಳಲ್ಲಿ ಸೂಚಿಸಲ್ಪಟ್ಟ ಹಾಗೆ ನಾನು ನಿರಾಕರಿಸಲ್ಪಡುವುದು ಸಹ ಆವಶ್ಯಕವಾಗಿತ್ತು. ಆದುದರಿಂದ ಯಾರ ಹೃದಯಗಳಲ್ಲಿ ಪರದೆ ಇದೆಯೋ ಅವರು ಸ್ವೀಕರಿಸುವುದಿಲ್ಲ. ಅಲ್ಲಾಹನು ಹಿಂದಿನ ಕಾಲದಲ್ಲಿ ಸಂದೇಶವಾಹಕರಿಗೆ ಸದಾ ನೆರವು ನೀಡಿದ ಹಾಗೆಯೇ ನಿಶ್ಚಯವಾಗಿಯೂ ನನಗೂ ನೆರವು ನೀಡುವನೆಂದು ನಾನು ತಿಳಿದಿದ್ದೇನೆ. ಯಾರೂ ನನ್ನ ಎದುರಾಗಿ ನಿಲ್ಲಲಾರರು. ಏಕೆಂದರೆ ಅವರಿಗೆ ಅಲ್ಲಾಹನ ಬೆಂಬಲವಿಲ್ಲ. ನಾನು ಎಲ್ಲೆಲ್ಲ ನುಬುವ್ವತ್ ಮತ್ತು ರಿಸಾಲತ್ ಬಗ್ಗೆ ನಿರಾಕರಿಸಿರುವೆನೋ ಅಲ್ಲೆಲ್ಲ ನಾನು ಸ್ವತಂತ್ರನಾಗಿ

14. ವಾಗ್ದತ್ತ ಮಸೀಹ್, ಭವಿಷ್ಯ ನುಡಿಯಲ್ಪಟ್ಟ ಲೋಕೋದ್ಧಾರಕ.

15. ಅಲ್ಲಾಹನ ಪ್ರತಿನಿಧಿ.

ಯಾವುದೇ ಶರೀಅತ್ ತಂದವನಲ್ಲ ಮತ್ತು ನಾನು ಸ್ವತಂತ್ರ ಪ್ರವಾದಿಯೂ ಅಲ್ಲ ಎಂಬ ಅರ್ಥದಲ್ಲಿ ಮಾತ್ರ ನಿರಾಕರಿಸಿದ್ದೇನೆ. ಆದರೆ ನಾನು ಅನುಸರಿಸುತ್ತಿರುವ ಪೈಗಂಬರರಿಂದ(ಸ) ಆಂತರಿಕ ಅನುಗ್ರಹಗಳನ್ನು ಗಳಿಸಿ, ಈ ಹೆಸರನ್ನೂ ತನಗಾಗಿ ಗಳಿಸಿ ಮತ್ತು ಅವರ ಮೂಲಕ ಅಲ್ಲಾಹನಿಂದ ಅದೃಶ್ಯ ಜ್ಞಾನ ಗಳಿಸಿದವನು ಎಂಬ ಅರ್ಥದಲ್ಲಿ ನಾನು ರಸೂಲ್ ಮತ್ತು ನಬಿಯಾಗಿರುವೆನು. ಆದರೆ ಯಾವುದೇ ಹೊಸ ಶರೀಅತ್ ರಹಿತ ನಬಿಯಾಗಿರುವೆನು. ಇಂತಹ ನಬಿಯಾಗಿರುವೆನು ಎಂಬುದರ ಬಗ್ಗೆ ನಾನು ಎಂದೂ ನಿರಾಕರಿಸಲಿಲ್ಲ. ಇದೇ ಅರ್ಥದಲ್ಲಿ ಅಲ್ಲಾಹನು ನನ್ನನ್ನು ನಬಿ ಎಂದೂ ರಸೂಲ್ ಎಂದೂ ಕರೆದಿರುವನು. ಆದ್ದರಿಂದ ಈಗಲೂ ಈ ಅರ್ಥದಲ್ಲಿ ನಬಿ ಮತ್ತು ರಸೂಲ್ ಆಗಿರುವ ಬಗ್ಗೆ ನಿರಾಕರಿಸಲಾರೆನು. "ಮನ್ ನೇಸ್ತಮ್ ರಸೂಲ್ ವ ನಯಾವರ್‌ದ ಅಮ್ ಕಿತಾಬ್" (ನಾನು ರಸೂಲ್ ಅಲ್ಲ ಮತ್ತು ನಾನು ಗ್ರಂಥ ತಂದಿಲ್ಲ) ಎಂಬ ನನ್ನ ಹೇಳಿಕೆಯ ಅರ್ಥವು ನಾನು ಶರೀಅತ್ ತಂದ ಪ್ರವಾದಿ ಅಲ್ಲ ಎಂದು ಮಾತ್ರವಾಗಿದೆ.

ಆದರೆ ನೆನಪಿಡಬೇಕಾದ ಮತ್ತು ಖಂಡಿತವಾಗಿಯೂ ಮರೆತುಬಿಡಬಾರದ ಒಂದು ವಿಷಯವೇನೆಂದರೆ, ನಾನು ನಬಿ ಎಂದೂ ರಸೂಲ್ ಎಂದೂ ಕರೆಯಲ್ಪಟ್ಟಿದ್ದರೂ ಈ ಎಲ್ಲ ಅನುಗ್ರಹಗಳು ನೇರವಾಗಿ ನನಗೆ ದೊರೆತವುಗಳಲ್ಲ. ಬದಲಾಗಿ ಆಕಾಶದಿಂದ ಒಬ್ಬ ಪರಿಶುದ್ಧ ವ್ಯಕ್ತಿಯ ಆಧ್ಯಾತ್ಮಿಕ ಅನುಗ್ರಹ ನನ್ನೊಂದಿಗೆ ಇದೆ ಎಂದು ಅಲ್ಲಾಹನು ನನಗೆ ತಿಳಿಸಿರುವನು. ಅದು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಧ್ಯಾತ್ಮಿಕ ಅನುಗ್ರಹವಾಗಿದೆ. ಈ ಅನುಗ್ರಹ ಮೂಲಕ ಅವರಲ್ಲಿಯೇ ಸೇರಿಕೊಂಡು ಅವರ ಮುಹಮ್ಮದ್ ಮತ್ತು ಅಹ್ಮದ್ ಎಂಬ ಹೆಸರುಗಳಿಂದ ಹೆಸರಿಸಲ್ಪಟ್ಟು ನಾನು ರಸೂಲ್ ಆಗಿದ್ದೇನೆ, ನಬಿಯೂ ಆಗಿದ್ದೇನೆ. ಎಂದರೆ ನಾನು ಅಲ್ಲಾಹನಿಂದ ಕಳುಹಿಸಲ್ಪಟ್ಟವನೂ ಅಲ್ಲಾಹನಿಂದ ಅದೃಶ್ಯ ಸಮಾಚಾರ ಗಳಿಸುವವನೂ ಆಗಿದ್ದೇನೆ. ಈ ರೀತಿ ಖಾತಮುನ್ನಬಿಯ್ಯೀನ್ ಎಂಬ ಮೊಹರು ಸುರಕ್ಷಿತವಾಯಿತು. ಏಕೆಂದರೆ ನಾನು ಪ್ರತಿಬಿಂಬದ ರೂಪದಲ್ಲಿ ಮತ್ತು ನೆರಳಿನ ರೂಪದಲ್ಲಿ ಪ್ರೇಮದ ಕನ್ನಡಿ ಮೂಲಕ ಅದೇ ಹೆಸರು ಗಳಿಸಿದೆನು. ಯಾರಾದರೂ ನನಗೆ ದೊರೆತ ದಿವ್ಯವಾಣಿ ಬಗ್ಗೆ ಸಿಟ್ಟುಗೊಂಡು ನನ್ನ ಹೆಸರನ್ನು ನಬಿ ಎಂದೂ ರಸೂಲ್ ಎಂದೂ ಇರಿಸಿದ್ದು ಏಕೆ ಎಂದು ಕೇಳುವುದಾದರೆ ಅದು ಅವನ ಮೂರ್ಖತನವಾಗಿದೆ. ಏಕೆಂದರೆ ನಾನು ನಬಿ ಮತ್ತು ರಸೂಲ್ ಆಗುವ

ಕಾರಣದಿಂದ ಅಲ್ಲಾಹನು ಹಾಕಿರುವ ಮುದ್ರೆ ಮುರಿಯಲ್ಪಡುವುದಿಲ್ಲ.* ದೇವನು ನನ್ನನ್ನು ರಸೂಲ್ ಮತ್ತು ನಬಿ ಎಂಬ ಹೆಸರಿನಲ್ಲಿ ಕರೆದಿರುವನು ಎಂದು ನಾನು ನನ್ನ ಬಗ್ಗೆ ಹೇಳುವ ಹಾಗೆಯೇ ನನ್ನ ವಿರೋಧಿಗಳು ಹಝ್ರತ್ ಈಸಬ್ನು ಮರ್‌ಯಮರ ಬಗ್ಗೆಯೂ ಹೇಳುತ್ತಾರೆ. ಎಂದರೆ ಅವರು ನಮ್ಮ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಪುನಃ ಲೋಕಕ್ಕೆ ಆಗಮಿಸುವರು ಎಂದು ಹೇಳುತ್ತಾರೆ ಎಂಬುದು ಮುಚ್ಚುಮರೆಯಿಲ್ಲದ ಸತ್ಯವಲ್ಲವೇ? ಅವರು ನಬಿಯಾಗಿರುವ ಕಾರಣದಿಂದ ನನ್ನ ಬಗ್ಗೆ ಮಾಡಲಾಗುವ ಆಕ್ಷೇಪದ ಹಾಗೆಯೇ ಅವರ ಬಗ್ಗೆ ಸಹ, ಅವರ ಆಗಮನದಿಂದ ಖಾತಮುನ್ನಬಿಯ್ಯೀನ್ ಎಂಬ ಮುದ್ರೆ ಮುರಿಯಲ್ಪಡುವುದು ಎಂಬುದಾಗಿ ಆಕ್ಷೇಪ ಉಂಟಾಗುವುದಿಲ್ಲವೇ? ಆದರೆ ಖಾತಮುನ್ನಬಿಯ್ಯೀನರಾದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ನಾನು ನಬಿ ಎಂದು ಕರೆಯಲ್ಪಡುವುದರಿಂದ ಯಾವುದೇ ಆಕ್ಷೇಪ ಉಂಟಾಗಲಾರದು ಮತ್ತು ಅದರಿಂದ ಖತ್‌ಮಿಯ್ಯತಿನ ಮುದ್ರೆ ಮುರಿಯಲ್ಪಡುವುದೂ ಇಲ್ಲ. ಏಕೆಂದರೆ,

وَّاٰخَرِيۡنَ مِنۡهُمۡ لَمَّا يَلۡحَقُوۡا بِهِمۡ‌ؕ وَهُوَ الۡعَزِيۡزُ الۡحَكِيۡمُ ○

ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ **(ಪವಿತ್ರ ಖುರ್‌ಆನ್ 62:4)** ಎಂಬ ಪವಿತ್ರ ಖುರ್‌ಆನ್ ವಚನದ ಪ್ರಕಾರ ನಾನು ಬರೂಝೀ (ತದ್ರೂಪ) ಪ್ರಕಾರ ಅದೇ ಖಾತಮುಲ್ ಅಂಬಿಯಾ ಆಗಿರುವೆನು ಎಂದು ನಾನು ಪದೇ ಪದೇ ಹೇಳಿರುವೆನು. ಇಂದಿನಿಂದ ಇಪ್ಪತ್ತು ವರ್ಷಗಳ ಹಿಂದೆ ಬರಾಹೀನೆ ಅಹ್ಮದಿಯಾದಲ್ಲಿ ನನ್ನ ಹೆಸರು ಮುಹಮ್ಮದ್ ಮತ್ತು ಅಹ್ಮದ್

---

* ಇದೆಷ್ಟು ಚಲೋದಾದ ವಿಷಯವಾಗಿದೆ! ಈ ರೀತಿ ಖಾತಮುನ್ನಬಿಯ್ಯೀನ್ ಎಂಬ ಭವಿಷ್ಯವಾಣಿಯ ಮುದ್ರೆ ಮುರಿಯಲ್ಪಡುವುದಿಲ್ಲ ಮತ್ತು ಮುಸ್ಲಿಮ್ ಉಮ್ಮತಿಗೆ ಸೇರಿದವರು ....لَا يُظۡهِرُ عَلٰى غَيۡبِهٖۤ اَحَدًا –'ಅವನು ತನ್ನ ರಹಸ್ಯಗಳನ್ನು ತನ್ನ ಸಂದೇಶವಾಹಕನಿಗೆ ಮಾತ್ರ ಬಹಿರಂಗಪಡಿಸುತ್ತಾನೆ' (ಪವಿತ್ರ ಖುರ್‌ಆನ್ ಎಂಬ ವಚನದ ಪ್ರಕಾರ ನುಬುವ್ವತಿನಿಂದ ವಂಚಿತರಾಗುವುದೂ ಇಲ್ಲ. ಆದರೆ ಇಸ್ಲಾಮಿಗಿಂತ ಆರು ನೂರು ವರ್ಷಗಳಷ್ಟು ಹಿಂದಿನ ನುಬುವ್ವತನ್ನು ಹೊಂದಿರುವ ಹಝ್ರತ್ ಈಸಾರನ್ನು ಪುನಃ ಇಳಿಸುವ ಮೂಲಕ ಇಸ್ಲಾಮಿನಲ್ಲಿ ಏನೂ ಬಾಕಿಯಾಗಿ ಉಳಿಯಲಾರದು ಮತ್ತು ಖಾತಮುನ್ನಬಿಯ್ಯೀನ್ ಎಂಬ ವಚನವನ್ನು ಅದು ಸಂಪೂರ್ಣವಾಗಿ ಸುಳ್ಳಾಗಿಸುವುದು. ಇದಕ್ಕೆದುರಾಗಿ ನಾವು ಕೇವಲ ವಿರೋಧಿಗಳ ಬೈಗಳನ್ನು ಆಲಿಸುವವರಾಗುವೆವು. ಆದುದರಿಂದ ಅವರು ಬೈಯುತ್ತಾ ಇರಲಿ. وَسَيَعۡلَمُ الَّذِيۡنَ ظَلَمُوۡۤا اَىَّ مُنۡقَلَبٍ يَّنۡقَلِبُوۡنَ – ದುಷ್ಕರ್ಮಿಗಳು ತಾವು ಯಾವ ತಾಣಕ್ಕೆ ಮರಳಿಸಲ್ಪಡುವರೆಂದು ಶೀಘ್ರದಲ್ಲೇ ತಿಳಿಯುವರು. **(ಪವಿತ್ರ ಖುರ್‌ಆನ್ 26: 228)**.

ಎಂದು ಅಲ್ಲಾಹನು ಇರಿಸಿದ್ದಾನೆ ಮತ್ತು ನನ್ನನ್ನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅದೇ ಅಸ್ತಿತ್ವ ಎಂದು ಹೇಳಿದ್ದಾನೆ. ನನ್ನ ನುಬುವ್ವತ್ ಕಾರಣದಿಂದ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖಾತಮುನ್ನಬಿಯ್ಯೀನ್ ಆಗಿರುವುದಕ್ಕೆ ಯಾವುದೇ ಭಂಗವುಂಟಾಗುವುದಿಲ್ಲ. ಏಕೆಂದರೆ ನೆರಳು ಅದರ ಮೂಲ ವಸ್ತುವಿನಿಂದ ಬೇರೆ ಅಲ್ಲ. ನಾನು ನೆರಳಿನ ರೂಪದಲ್ಲಿ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುವ ಕಾರಣದಿಂದ ಖಾತಮುನ್ನಬಿಯ್ಯೀನ್ ಎಂಬ ಮುದ್ರೆ ಮುರಿಯಲ್ಪಡುವುದಿಲ್ಲ. ಏಕೆಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತ್ ಮುಹಮ್ಮದ್ ತನಕ ಸೀಮಿತವಾಯಿತು. ಎಂದರೆ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ನಬಿ ಆಗಿರುತ್ತಾರೆ. ಬೇರೆ ಯಾರೂ ಅಲ್ಲ. ನಾನು ಪ್ರತಿರೂಪದಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿರುವಾಗ ಮತ್ತು ಮುಹಮ್ಮದ್ ಪೈಗಂಬರರ(ಸ) ಪ್ರವಾದಿತ್ವ ಸಮೇತ ಅವರ ಎಲ್ಲ ಪರಿಪೂರ್ಣತೆಗಳು ನನ್ನ ನೆರಳಿನ ಕನ್ನಡಿಯಲ್ಲಿ ಪ್ರತಿಬಿಂಬಿಸುವುದರಿಂದ ಬೇರೆ ಒಬ್ಬನು ನುಬುವ್ವತ್ ವಾದ ಮಾಡಿದ ಹಾಗೆ ಆಗಲಾರದು. ಇನ್ನೂ ನನ್ನನ್ನು ಅಂಗೀಕರಿಸುವುದಿಲ್ಲವಾದರೆ ನೀವು ತಿಳಿದುಕೊಳ್ಳಿರಿ, ಮಹ್‌ದಿ ಮೌಊದ್ ಖಲಕ್ (ಸೃಷ್ಟಿಯಲ್ಲೂ) ಖುಲ್‌ಕ್‌ನಲ್ಲೂ (ಸ್ವಭಾವ ಗುಣದಲ್ಲೂ) ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸಮಾನವಾಗಿರುವರು ಎಂದು ನಿಮ್ಮ ಹದೀಸುಗಳಲ್ಲೂ ಬರೆದಿದೆ. ಮಹ್‌ದಿಯ ಹೆಸರು ಅವರ ಹೆಸರಿನ ಹಾಗೆಯೇ ಇರುವುದು. ಎಂದರೆ ಅವರ ಹೆಸರು ಕೂಡ ಮುಹಮ್ಮದ್ ಮತ್ತು ಅಹ್ಮದ್ ಎಂದಾಗಿರುವುದು ಹಾಗೂ ಅವರು ಅಹ್ಲೆ ಬೈತಿಗೆ {ಹಝ್ರತ್ ಪೈಗಂಬರರ(ಸ) ಕುಟುಂಬ} ಸೇರಿದವರಾಗುವರು* ಎಂದು

* ನನ್ನ ತಂದೆ ತಾತಂದಿರ ಚರಿತ್ರೆಯಿಂದ ತಿಳಿಯುವುದೇನೆಂದರೆ ನಮ್ಮ ಒಬ್ಬ ಅಜ್ಜನವರ ಪತ್ನಿ ಸಯ್ಯಿದ್ ಕುಲದವರಾಗಿದ್ದರು ಮತ್ತು ಬನೀ ಫಾತಿಮ ವಂಶದವರಾಗಿದ್ದರು. ಇದನ್ನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಸತ್ಯಪಡಿಸಿದರು. ಒಂದು ಸ್ವಪ್ನದಲ್ಲಿ ಹಝ್ರತ್ ಪೈಗಂಬರ್(ಸ) ನನ್ನೊಂದಿಗೆ ಹೇಳಿದರು: سَلْمَانُ مِنَّا أَهْلَ الْبَيْتِ عَلٰى مَشْرَبِ الْحَسَنِ (ಸಲ್ಮಾನ್ ನಮ್ಮ ಕುಟುಂಬಕ್ಕೆ ಸೇರಿದವರಾಗಿರುವರು. ಅವರು ಹಸನಿನ ಸ್ವಭಾವಗುಣಗಳನ್ನು ಹೊಂದಿರುವರು.) ಹೀಗೆ ಸಲ್ಮಾನ್ ಎಂದು ನನ್ನನ್ನು ಹೆಸರಿಸಿದರು. ಎಂದರೆ ಎರಡು ಸಿಲ್ಮ್. "ಸಿಲ್ಮ್" ಎಂದು ಅರಬಿ ಭಾಷೆಯಲ್ಲಿ ಸುಧಾರಣೆ, ರಾಜಿ, ಸಾಮರಸ್ಯಕ್ಕೆ ಹೇಳಲಾಗುತ್ತದೆ. ಎಂದರೆ ನನ್ನ ಮೂಲಕ ಎರಡು ಸುಧಾರಣೆಗಳು

ಬರೆದಿದೆ. ಮಾತ್ರವಲ್ಲ, ಕೆಲವು ಹದೀಸುಗಳಲ್ಲಿ "ಅವರು ನನ್ನಿಂದ ಆಗುವರು"

ಜರಗುವುವು. ಒಂದು ಆಂತರಿಕ ಸುಧಾರಣೆ. ಎಂದರೆ ಆಂತರಿಕ ಹಗೆ, ಅಸೂಯೆಗಳನ್ನು ಕೊನೆಗೊಳಿಸುವುದು. ಮತ್ತು ಎರಡನೆಯದು ಬಾಹ್ಯವಾದುದು ಎಂದರೆ ಬಾಹ್ಯ ಶತ್ರುತ್ವದ ಕಾರಣಗಳನ್ನು ನಾಶಮಾಡಿ ಇಸ್ಲಾಮಿನ ಶ್ರೇಷ್ಠತೆ ತೋರಿಸಿ ಅನ್ಯ ಧರ್ಮದ ಜನರನ್ನು ಇಸ್ಲಾಮಿನ ಕಡೆಗೆ ಬಾಗುವಂತೆ ಮಾಡುವುದು. ಹದೀಸಿನಲ್ಲಿರುವ ಸಲ್ಮಾನ್ ಸಹ ನನ್ನನ್ನೇ ಉದ್ದೇಶಿಸಿದೆ. ಹಿಂದಿನ ಸಲ್ಮಾನ್‌ಗೆ ಎರಡು ಸುಧಾರಣೆಗಳ ಭವಿಷ್ಯವಾಣಿ ಅನ್ವಯಿಸುವುದಿಲ್ಲ. ನಾನು ಬನೀ ಫಾರಸೀ ವಂಶಕ್ಕೆ ಸೇರಿದವನಾಗಿದ್ದೇನೆ ಎಂದು ಅಲ್ಲಾಹನಿಂದ ದಿವ್ಯವಾಣಿ ಮೂಲಕ ತಿಳಿದು ಹೇಳುತ್ತೇನೆ. ಕನ್‌ಝುಲ್ ಉಮ್ಮಾಲ್ ಗ್ರಂಥದಲ್ಲಿರುವ ಹದೀಸ್ ಪ್ರಕಾರ ನಾನು ಬನೀ ಫಾರ್ಸೀ, ಬನೀ ಇಸ್ರಾಈಲ್ ಮತ್ತು ಅಹ್ಲೆ ಬೈತಿಗೆ ಸೇರಿದ್ದೇನೆ. ಹಝ್ರತ್ ಫಾತಿಮ ಕಶ್‌ಫೀ ಸ್ಥಿತಿಯಲ್ಲಿ (ದರ್ಶನದ ಸ್ಥಿತಿಯಲ್ಲಿ) ತನ್ನ ಮಡಿಲಲ್ಲಿ ನನ್ನ ತಲೆ ಇರಿಸಿ ನಾನು ಅವರ ವಂಶದವನೆಂದು ಸೂಚಿಸಿದ್ದಾರೆ. ಈ ಕಶ್‌ಫ್ ಬರಾಹೀನೆ ಅಹ್ಮದಿಯಾದಲ್ಲಿದೆ.*

* ಬರಾಹೀನೆ ಅಹ್ಮದಿಯಾದಲ್ಲಿ ಈ ಕಶ್‌ಫ್ ಹೀಗೆ ಇದೆ: ಮೇಲೆ ವಿವರಿಸಿದ ಇಲ್‌ಹಾಮ್‌ನಲ್ಲಿ ಹಝ್ರತ್ ಪೈಗಂಬರರ(ಸ) ಕುಟುಂಬಕ್ಕೆ ದುರೂದ್ ಪ್ರಾರ್ಥನೆ ಮಾಡಲು ಆಜ್ಞೆ ಇದೆ. ಇದರಲ್ಲಿರುವ ರಹಸ್ಯವೇನೆಂದರೆ ಅಹ್ಲೆ ಬೈತಿನೊಂದಿಗೆ ಪ್ರೀತಿ ಇರಿಸುವುದು ಸಹ ಅಲ್ಲಾಹನ ಅನುಗ್ರಹದ ಪ್ರಕಾಶ ಗಳಿಸುವುದರಲ್ಲಿ ಬಹಳ ಮುಖ್ಯ ಸ್ಥಾನವನ್ನು ಹೊಂದಿದೆ. ಸರ್ವಶಕ್ತನಾದ ಅಲ್ಲಾಹನ ಸಾಮೀಪ್ಯ ಗಳಿಸುವವರಲ್ಲಿ ಸೇರುವವರು ಆ ಪರಿಶುದ್ಧರ ವಾರಸುದಾರನಾಗುತ್ತಾನೆ ಮತ್ತು ಎಲ್ಲ ವಿದ್ಯೆಗಳಲ್ಲಿಯೂ ಜ್ಞಾನದಲ್ಲಿಯೂ ಅವರ ವಾರಸುದಾರನಾಗುತ್ತಾನೆ. ಇಲ್ಲಿ ಒಂದು ಅತ್ಯಂತ ಪ್ರಕಾಶಮಾನವಾದ ಕಶ್‌ಫ್ (ದರ್ಶನ) ನೆನಪಿಗೆ ಬರುತ್ತದೆ. ಅದು ಹೀಗೆ: ಒಂದು ದಿವಸ ಮಗ್‌ರಿಬ್ ನಮಾಝ್ ನಂತರ ಎಚ್ಚರವಾಗಿರುವಾಗಲೇ ಒಂದು ರೀತಿಯ ಅಲ್ಪ ಮಟ್ಟದ ಪ್ರಜ್ಞಾಶೂನ್ಯತೆಯಲ್ಲಿ ಒಂದು ಅದ್ಭುತ ಲೋಕವನ್ನು ಕಂಡೆನು. ಕೆಲವು ಜನರು ಬೇಗ ಬೇಗನೆ ಆಗಮಿಸುವ ಹಾಗೆ ಮೊದಲು ಶಬ್ದ ಕೇಳಿಸಿತು. ವೇಗದಿಂದ ನಡೆಯುವವರ ಪಾದರಕ್ಷೆಗಳ ಶಬ್ದ ಕೇಳಿಸಿತು. ಅನಂತರ ಐವರು ಸುಂದರ ಆಕರ್ಷಕ ವ್ಯಕ್ತಿತ್ವವುಳ್ಳವರೂ ನನ್ನ ಮುಂದೆ ಬಂದರು. ಎಂದರೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಹಝ್ರತ್ ಅಲೀ, ಹಸನ್, ಹುಸೈನ್ ಮತ್ತು ಫಾತಿಮ ಝುಹ್ರಾ (ರಝಿಯಲ್ಲಾಹು ಅನ್‌ಹುಂ ಅಜ್‌ಮಈನ್). ಅವರಲ್ಲಿ ಒಬ್ಬರಾದ ಹಝ್ರತ್ ಫಾತಿಮ ರಝಿಯಲ್ಲಾಹು ಅನ್‌ಹಾ ಅತ್ಯಂತ ಪ್ರೀತಿ ವಾತ್ಸಲ್ಯದಿಂದ ವಾತ್ಸಲ್ಯಮಯ ಮಾತೆಯ ಹಾಗೆ ಈ ವಿನೀತನ ತಲೆಯನ್ನು ತನ್ನ ಮಡಿಲಲ್ಲಿ ಇರಿಸಿದರು. ಅನಂತರ ನನಗೆ ಒಂದು ಗ್ರಂಥವನ್ನು ನೀಡಲಾಯಿತು. ಅದು ತಫ್‌ಸೀರೆ ಖುರ್‌ಆನ್ ಎಂದೂ ಅದನ್ನು ಹಝ್ರತ್ ಅಲಿ ಬರೆದಿರುವರೆಂದೂ ಈಗ ಆ ತಫ್‌ಸೀರನ್ನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ನಿನಗೆ ನೀಡುತ್ತಿದ್ದಾರೆ ಎಂದೂ ನನ್ನೊಡನೆ ಹೇಳಲಾಯಿತು. ಅದಕ್ಕಾಗಿ ನಾನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇನೆ.

(ಬರಾಹೀನೆ ಅಹ್ಮದಿಯಾ, ರೂಹಾನೀ ಖಝಾಇನ್ ಸಂಪುಟ 1 ಪುಟ 599 ಹಾಶಿಯದರ್ ಹಾಶಿಯ ನಂಬರ್ 3).

ಎಂದೂ ಬಂದಿದೆ. ಇದು ಸೂಕ್ಷ್ಮವಾದ ಒಂದು ಸೂಚನೆಯನ್ನು ನೀಡುತ್ತದೆ. ಮಹ್‌ದೀ ಆಧ್ಯಾತ್ಮಿಕವಾಗಿ ಆ ಪ್ರವಾದಿಯಿಂದಲೇ ಹೊರಬಂದವರು ಮತ್ತು ಆ ಪ್ರವಾದಿಯ ಆತ್ಮದ ರೂಪವಾಗಿರುವರು ಎಂಬುದನ್ನು ಅದು ಸೂಚಿಸುತ್ತದೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಈ ಸಂಬಂಧವನ್ನು ಸೂಚಿಸಲು ಉಪಯೋಗಿಸಿದ ಪದಗಳು ಇದಕ್ಕೆ ಬೆಂಬಲ ನೀಡುತ್ತದೆ. ಎಷ್ಟರ ವರೆಗೆ ಎಂದರೆ, ತನ್ನ ಹೆಸರನ್ನೇ ಅವರಿಗೆ ನೀಡಿರುವರು. ಇವುಗಳಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಯಶೂಅ ಪ್ರವಾದಿಯು ಹಝ್ರತ್ ಮೂಸಾ ಅಲೈಹಿಸ್ಸಲಾಮರ ಪ್ರತಿರೂಪವಾಗಿದ್ದ ಹಾಗೆಯೇ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಾಗ್ದತ್ತ ವ್ಯಕ್ತಿಯನ್ನು ತನ್ನ ಹಾಗೆ ಇರುವವನು ಎಂದು ಹೇಳಲು ಬಯಸಿದ್ದರು. ಒಬ್ಬನು ಇನ್ನೊಬ್ಬನಿಗೆ ತದ್ರೂಪಿಯಾಗಲು, ಅವನ ಪುತ್ರ ಅಥವಾ ಮೊಮ್ಮಗನಾಗಬೇಕಾಗಿಲ್ಲ. ಬದಲಾಗಿ, ಅವನು ಯಾವ ವ್ಯಕ್ತಿಯ ತದ್ರೂಪಿಯಾಗಿರುತ್ತಾನೋ ಆ ವ್ಯಕ್ತಿಯಿಂದ ಆಧ್ಯಾತ್ಮಿಕವಾದ ಸಂಬಂಧದ ಆಧಾರದಲ್ಲಿ ಹೊರಬಂದವನಾಗಿರಬೇಕು. ಮಾತ್ರವಲ್ಲ, ಅವರ ನಡುವೆ ಆದಿಯಿಂದಲೇ ಪರಸ್ಪರ ಆಕರ್ಷಣೆ ಮತ್ತು ಸಂಬಂಧವಿರಬೇಕು. ತದ್ರೂಪಿ (ಬರೂಝ್) ಎಂಬ ಪದದ ಯಥಾರ್ಥ ಅರ್ಥವನ್ನು ಅರಿಯಲು ಆವಶ್ಯಕವಾದ ಈ ಹೇಳಿಕೆಯನ್ನು ಬಿಟ್ಟುಬಿಡುವುದು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವಕ್ಕೆ ವಿರುದ್ಧವಾಗಿದೆ. ಅದರ ಬದಲಾಗಿ ಅವರು ನನ್ನ ಮೊಮ್ಮಗನಾಗಿರುತ್ತಾನೆ ಎಂದು ಹೇಳುವುದು ತಪ್ಪಾಗುವುದು. ಅದಕ್ಕೆ ತದ್ರೂಪಿ ಎಂಬ ಪದದೊಂದಿಗೆ ಯಾವ ಸಂಬಂಧವಿದೆ? ತದ್ರೂಪಿಯಾಗಲು ಮೊಮ್ಮಗನಾಗಬೇಕೆಂಬ ಸಂಬಂಧದ ಆವಶ್ಯವಿದ್ದರೆ, ಮೊಮ್ಮಗನೆಂಬ ನ್ಯೂನತೆಭರಿತ ಸಂಬಂಧಕ್ಕಿಂತ ಪುತ್ರನೆಂಬ ಸಂಬಂಧ ಉತ್ತಮವಲ್ಲವೇ?. ವಾಸ್ತವದಲ್ಲಿ, ಅಲ್ಲಾಹನು ತನ್ನ ವಚನದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವುದೇ ಪುರುಷನ ಪಿತನಲ್ಲ ಎಂದು ಹೇಳುವುದರೊಂದಿಗೆ ತದ್ರೂಪಿ ಆಗಮಿಸುವ ಸುವಾರ್ತೆಯನ್ನೂ ನೀಡಿದ್ದಾನೆ. ಹಝ್ರತ್ ಪೈಗಂಬರರ(ಸ) ತದ್ರೂಪಿಯಾಗಿ ಒಬ್ಬ ಮಹಾನುಭಾವ ಆಗಮಿಸುವರು ಎಂದು ಹೇಳಿದ್ದು ಸತ್ಯವಲ್ಲವಾದರೆ

وَّاٰخَرِيْنَ مِنْهُمْ

– **ವ ಆಖರೀನ ಮಿನ್‌ಹುಮ್**[16] ಎಂಬ ಪವಿತ್ರ ಖುರ್‌ಆನ್ ವಚನದಲ್ಲಿ ವಾಗ್ದತ್ತ ಮಹಾನುಭಾವರ ಸಂಗಡಿಗರಿಗೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರ ಸ್ಥಾನ ನೀಡಿದುದೇಕೆ? ತದ್ರೂಪಿಯ ಆಗಮನವನ್ನು ನಿರಾಕರಿಸಿದರೆ ಪವಿತ್ರ ಖುರ್‌ಆನಿನ ಈ ವಚನವನ್ನು ರದ್ದುಗೊಳಿಸಿದಂತಾಗುವುದು. ಶಾರೀರಿಕ ಸಂಬಂಧದ ಪ್ರತಿಪಾದಕರಾದ ಜನರಲ್ಲಿ ಕೆಲವರು ವಾಗ್ದತ್ತ ಮಹಾನುಭಾವರನ್ನು ಹಝ್ರತ್ ಹಸನರ ಸಂತಾನದವರಾಗಿ ಮಾಡಿದ್ದಾರೆ. ಕೆಲವರು ಹಝ್ರತ್ ಹುಸೈನರ ಸಂತಾನದವರಾಗಿ ಮತ್ತು ಬೇರೆ ಕೆಲವರು ಹಝ್ರತ್ ಅಬ್ಬಾಸರ ಸಂತಾನಕ್ಕೆ ಸೇರಿದವರಾಗಿ ಹೇಳಿದ್ದಾರೆ. ಆದರೆ ವಾಸ್ತವದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತಿನ ಉದ್ದೇಶವೇನೆಂದರೆ, ಸ್ವಂತ ಪುತ್ರನ ಹಾಗೆ ವಾಗ್ದತ್ತ ಮಹಾನುಭಾವರು ಹಝ್ರತ್ ಪೈಗಂಬರರ(ಸ) ವಾರಸುದಾರರಾಗುವರು ಎಂದಾಗಿದೆ. ಅವರ ಹೆಸರಿನ ವಾರಸುದಾರರಾಗುವರು, ಅವರ ಸ್ವಭಾವಗುಣಗಳ ವಾರಸುದಾರರಾಗುವರು, ಅವರ ಜ್ಞಾನದ ವಾರಸುದಾರರಾಗುವರು, ಅವರ ಆಧ್ಯಾತ್ಮಿಕತೆಯ ವಾರಸುದಾರರಾಗುವರು. ಪ್ರತಿಯೊಂದು ರೀತಿಯಲ್ಲಿ ವಾಗ್ದತ್ತ ಮಹಾನುಭಾವ ತನ್ನೊಳಗೆ ಹಝ್ರತ್ ಪೈಗಂಬರರ(ಸ) ಚಿತ್ರವನ್ನು ಹೊಂದುವರು. ಎಲ್ಲವನ್ನೂ ಹಝ್ರತ್ ಪೈಗಂಬರರ(ಸ) ಮೂಲಕವೇ ಪಡೆಯುವರು. ಅವರಲ್ಲಿ ಅರ್ಪಿತನಾಗಿ ಅವರ ಮುಖವನ್ನು ತೋರಿಸುವರು. ಒಟ್ಟಿನಲ್ಲಿ, ಯಾವ ರೀತಿಯಲ್ಲಿ ವಾಗ್ದತ್ತ ವ್ಯಕ್ತಿಯು ನೆರಳಿನ ರೂಪದಲ್ಲಿ ಹಝ್ರತ್ ಪೈಗಂಬರರ(ಸ) ಹೆಸರನ್ನು, ಅವರ ಸ್ವಭಾವ ಗುಣಗಳನ್ನು, ಅವರ ಜ್ಞಾನವನ್ನು ಗಳಿಸುವರೋ ಅದೇ ರೀತಿಯಲ್ಲಿ ಅವರಿಂದ ನಬಿ ಎಂಬ ಬಿರುದನ್ನು ಸಹ ಪಡೆಯುವರು. ಏಕೆಂದರೆ ತದ್ರೂಪಿಯ ಚಿತ್ರ ಪರಿಪೂರ್ಣವಾಗಲು ಪ್ರತಿಯೊಂದು ರೀತಿಯಲ್ಲಿ ಮೂಲ ರೂಪಿಯ ಗುಣಗಳನ್ನು ಪರಿಪೂರ್ಣವಾಗಿ ತನ್ನಲ್ಲಿ ಹೊಂದಿರಬೇಕು. ಪ್ರವಾದಿತ್ವ ಎಂಬುದು ಸಹ ಒಬ್ಬ ಪ್ರವಾದಿಯ ಶ್ರೇಷ್ಠತೆಯಾಗಿರುವುದರಿಂದ ಪ್ರವಾದಿಯ ಪ್ರತಿರೂಪದಲ್ಲೂ ಅದು ಇರಬೇಕಾದುದು ಆವಶ್ಯಕವಾಗಿದೆ. ತದ್ರೂಪಿ ತನ್ನ ಮೂಲ ರೂಪಿಯ ಪೂರ್ಣ ಚಿತ್ರವಾಗಿರುತ್ತಾನೆ ಮತ್ತು ಹೆಸರು ಸಹ ಒಂದೇ ಬಗೆಯದಾಗಿರುತ್ತದೆ ಎಂದು ಎಲ್ಲ ಪ್ರವಾದಿಗಳು ಅಂಗೀಕರಿಸುತ್ತಾ ಬಂದಿರುವರು. ಆದುದರಿಂದ ಸ್ಪಷ್ಟವಾಗುವುದೇನೆಂದರೆ, ತದ್ರೂಪಿಯಾಗಿ ಒಬ್ಬರಿಗೆ

16. ಅವರ ಪೈಕಿಯ ಇನ್ನೊಂದು ಜನತೆಯಲ್ಲೂ (**ಪವಿತ್ರ ಖುರ್‌ಆನ್ 62:4**)

ಮುಹಮ್ಮದ್ ಮತ್ತು ಅಹ್ಮದ್ ಎಂಬ ಹೆಸರನ್ನು ಇರಿಸುವುದರಿಂದ ಇಬ್ಬರು ಮುಹಮ್ಮದ್‌ಗಳು ಮತ್ತು ಅಹ್ಮದ್‌ಗಳು ಇವೆಯೆಂದು ಆಗುವುದಿಲ್ಲ. ಅದೇ ರೀತಿ ತದ್ರೂಪಿಯಾಗಿ ಒಬ್ಬರು ನಬಿ ಮತ್ತು ರಸೂಲ್ ಆಗುವುದರಿಂದ ಖಾತಮುನ್ನಬಿಯ್ಯೀನ್ ಎಂಬ ಮುದ್ರೆಗೆ ಭಂಗ ಸಂಭವಿಸುವುದಿಲ್ಲ. ಏಕೆಂದರೆ ತದ್ರೂಪಿ ಅಸ್ತಿತ್ವ ಬೇರೆಯೇ ಅಸ್ತಿತ್ವವಲ್ಲ. ಈ ರೀತಿಯಲ್ಲಿ ಮುಹಮ್ಮದ್ ಎಂಬ ಹೆಸರಿನ ನುಬುವ್ವತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಸೀಮಿತವಾಗುವುದು. ತದ್ರೂಪದಲ್ಲಿ ಇಬ್ಬಗೆ ಅಥವಾ ವ್ಯತ್ಯಾಸವಿರುವುದಿಲ್ಲ ಎಂದು ಎಲ್ಲ ಪ್ರವಾದಿಗಳು ಒಮ್ಮತಾಭಿಪ್ರಾಯವನ್ನು ಹೊಂದಿರುವರು. ಏಕೆಂದರೆ ತದ್ರೂಪದ ಸ್ಥಿತಿಯು ಈ ದ್ವಿಪದಿಯಲ್ಲಿ ಹೇಳಿರುವಂತೆ ಆಗಿರುತ್ತದೆ:

**ಮನ್ ತೂ ಶುದಮ್ ತೂ ಮನ್ ಶುದೀ**

**ಮನ್ ತನ್ ಶುದಮ್ ತೂ ಜಾನ್‌ಶುದೀ**

**ತಾಕಸ್ ನ ಗೋಯದ್ ಬಅದ್ ಝೀ೦**

**ಮನ್ ದೀಗರಮ್ ತೂ ದೀಗರೀ**

ನಾನು ನೀನಾದೆ ನೀನು ನಾನಾದೆ

ನಾನು ಶರೀರವಾದೆ ನೀನು ಜೀವವಾದೆ

ನಾನು ಬೇರೆ ನೀನು ಬೇರೆ ಎಂದು

ಯಾರಾದರೂ ನಂತರ ಹೇಳದಿರಲಿ

ಆದರೆ ಹಝ್ರತ್ ಈಸಾ ಅಲೈಹಿಸ್ಸಲಾಮ್ ಲೋಕಕ್ಕೆ ಆಗಮಿಸುವರಾದರೆ ಖಾತಮುನ್ನಬಿಯ್ಯೀನ್ ಎಂಬ ಮೊಹರನ್ನು ಮುರಿಯದೆ ಬರುವರಾದರೂ ಹೇಗೆ? ಒಟ್ಟಿನಲ್ಲಿ, ಖಾತಮುನ್ನಬಿಯ್ಯೀನ್ ಎಂಬುದು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಬುವ್ವತಿಗೆ ಹಾಕಲಾಗಿರುವ ಒಂದು ದೈವಿಕ ಮುದ್ರೆಯಾಗಿದೆ. ಈ ಮುದ್ರೆ ಎಂದೂ ಮುರಿದು ಹೋಗಲು ಸಾಧ್ಯವಿಲ್ಲ. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತದ್ರೂಪಿಯಾಗಿ ಒಮ್ಮೆಯಲ್ಲ ಸಾವಿರ ಸಾರಿ ಕೂಡ ಆಗಮಿಸಬಹುದಾಗಿದೆ ಮತ್ತು ತದ್ರೂಪಿಯಾಗಿ ಶ್ರೇಷ್ಠತೆಗಳೊಂದಿಗೆ ತನ್ನ ನುಬುವ್ವತ್ತನ್ನು ಪ್ರಕಟಿಸಬಹುದು. ಈ

ತದ್ರೂಪ ಎಂಬುದು

وَّاٰخَرِيْنَ مِنْهُمْ لَمَّا يَلْحَقُوْا بِهِمْ ۗ وَهُوَ الْعَزِيْزُ الْحَكِيْمُ ○

ಎಂಬ ವಚನದಲ್ಲಿ[17] ಅಲ್ಲಾಹನು ಮಾಡಿದ ಒಂದು ಒಡಂಬಡಿಕೆ ಅಥವಾ ವಾಗ್ದಾನವಾಗಿತ್ತು. ಪ್ರವಾದಿಗಳಿಗೆ ತಮ್ಮದೇ ತದ್ರೂಪಿಗಳ ಬಗ್ಗೆ ಮತ್ಸರ ಅಥವಾ ಅಸೂಯೆ ಇರುವುದಿಲ್ಲ. ಏಕೆಂದರೆ ತದ್ರೂಪಿ ಅವರದೇ ರೂಪ ಮತ್ತು ನಕ್ಷೆ ಆಗಿರುತ್ತಾರೆ. ಆದರೆ ಬೇರೆಯವರ ಕಾರಣದಿಂದ ಸ್ವಾಭಿಮಾನಕ್ಕೆ ಧಕ್ಕೆ ಆದಂತೆ ಆಗುತ್ತದೆ. ನೀವು ನೋಡಿರಿ, ಮಿಅ್‌ರಾಜ್ ರಾತ್ರಿಯಲ್ಲಿ ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರ್‌ರತ್ ಮೂಸಾ ಅಲೈಹಿಸ್ಸಲಾಮರಿದ್ದ ಸ್ಥಾನದಿಂದ ಮುಂದೆ ಸಾಗಿದುದನ್ನು ಕಂಡಾಗ ಹಝ್ರ್‌ರತ್ ಮೂಸಾ ಅಲೈಹಿಸ್ಸಲಾಮ್ ಅಳುತ್ತಾ ತನ್ನ ಆತ್ಮಾಭಿಮಾನವನ್ನು ಪ್ರಕಟಿಸಿದರು. ಹೀಗಿರುವಾಗ ನಿನ್ನ ಅನಂತರ ಬೇರೆ ಒಬ್ಬ ಪ್ರವಾದಿ ಬರಲಾರರೆಂದು ಅಲ್ಲಾಹನು ಹಝ್ರ್‌ರತ್ ಪೈಗಂಬರ್‌ರೊಡನೆ[ಸ] ಹೇಳಿದ ನಂತರ ತನ್ನ ಹೇಳಿಕೆಗೆ ವಿರುದ್ಧವಾಗಿ ಹಝ್ರ್‌ರತ್ ಈಸಾರನ್ನು ಕಳುಹಿಸಿದರೆ ಅದು ಹಝ್ರ್‌ರತ್ ಪೈಗಂಬರ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನಸ್ಸನ್ನು ಎಷ್ಟು ನೋಯಿಸುವುದು ಎಂದು ಚಿಂತಿಸಿರಿ. ಒಟ್ಟಿನಲ್ಲಿ, ಒಬ್ಬರು ತದ್ರೂಪಿಯಾಗಿ ನುಬುವ್ವತ್ ಗಳಿಸುವುದರಿಂದ ಹಝುರತ್ ಪೈಗಂಬರರ[ಸ] ಖತ್‌ಮುನ್ನುಬುವ್ವತ್ ಎಂಬ ಸ್ಥಾನವು ವ್ಯತ್ಯಾಸಗೊಳ್ಳುವುದೂ ಇಲ್ಲ ಅವರ ಖಾತಮುನ್ನಬಿಯ್ಯೀನ್ ಎಂಬ ಮೊಹರು ಮುರಿದು ಹೋಗುವುದೂ ಇಲ್ಲ. ಆದರೆ ಬೇರೆ ಸ್ವತಂತ್ರ ಪ್ರವಾದಿ ಆಗಮಿಸುವುದರಿಂದ ಇಸ್ಲಾಮನ್ನು ಬೇರುಸಹಿತ ಕಿತ್ತುಹಾಕಿದಂತಾಗುವುದು. ದಜ್ಜಾಲನನ್ನು ದಮನಿಸುವ ಮಹತ್ಕಾರ್ಯವನ್ನು ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬದಲಾಗಿ ಹಝ್ರ್‌ರತ್ ಈಸಾ[ಅ] ಮಾಡುವರು ಎಂಬ ಮಾತಿನಿಂದ ಹಝ್ರ್‌ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಠಿಣವಾಗಿ ಅಪಮಾನಿಸಿದಂತಾಗುವುದು. ಇದರಿಂದ

وَلٰكِنْ رَّسُوْلَ اللّٰهِ وَخَاتَمَ النَّبِيّٖنَ

17. ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ **(62:4)**

– ಎಂಬ ವಚನ[18] ಸುಳ್ಳಾಗುವುದು – ನಊಧುಬಿಲ್ಲಾಹ್.

ಈ ವಚನದಲ್ಲಿ ಒಂದು ಭವಿಷ್ಯವಾಣಿ ಅಡಕವಾಗಿದೆ. ಅದೇನೆಂದರೆ, ನುಬುವ್ವತಿಗೆ ಕೊನೆಗಾಲದ ತನಕ ಮುದ್ರೆ ಹಾಕಲಾಗಿದೆ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರದ್ದೇ ಅಸ್ತಿತ್ವವಾದ ತದ್ರೂಪಿಗಳ ಹೊರತು ಬೇರೆ ಯಾರಿಗೂ ಪ್ರವಾದಿಗಳಿಗೆ ಲಭಿಸಿದಂತಹ ಸುವ್ಯಕ್ತವಾದ ಅದೃಶ್ಯ ಸಮಾಚಾರ ಅಲ್ಲಾಹನಿಂದ ಲಭಿಸಲಾರದು. ಪ್ರಾಚೀನ ಕಾಲದಿಂದ ವಾಗ್ದಾನ ಮಾಡಲ್ಪಟ್ಟ ಮುಹಮ್ಮದೀ ಪ್ರತಿರೂಪ ನಾನಾಗಿರುವುದರಿಂದ ನನಗೆ ತದ್ರೂಪಿಯಾಗಿ ಪ್ರವಾದಿತ್ವ ನೀಡಲ್ಪಟ್ಟಿದೆ. ಈ ರೀತಿಯ ನುಬುವ್ವತಿಗೆ ವಿರುದ್ಧವಾಗಿ ಈಗ ಸಮಸ್ತ ಲೋಕದಲ್ಲಿ ಬೇರೆ ನುಬುವ್ವತ್ ಇಲ್ಲ. ಏಕೆಂದರೆ ನುಬುವ್ವತಿಗೆ ಮುದ್ರೆ ಹಾಕಲಾಗಿದೆ. ಒಬ್ಬ ಮುಹಮ್ಮದೀ ತದ್ರೂಪಿ ಮುಹಮ್ಮದ್ ಪೈಗಂಬರರ[ಸ] ಎಲ್ಲ ಪರಿಪೂರ್ಣತೆಗಳೊಂದಿಗೆ ಕೊನೆಗಾಲದಲ್ಲಿ ಆಗಮಿಸಬೇಕೆಂಬುದು ವಿಧಿಸಲ್ಪಟ್ಟದ್ದಾಗಿತ್ತು. ಆ ತದ್ರೂಪಿ ಪ್ರಕಟವಾಗಿರುವನು. ಈ ಒಂದು ಕಿಟಕಿಯ ಹೊರತು ನುಬುವ್ವತ್ತಿನ ಕಾರಂಜಿಯಿಂದ ನೀರನ್ನು ಕುಡಿಯಲು ಬೇರೆ ಕಿಟಕಿ ಇಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ತದ್ರೂಪಿಯ ರೀತಿಯ ನುಬುವ್ವತ್ ಮತ್ತು ರಿಸಾಲತಿನಿಂದ ಖತಮಿಯ್ಯತಿನ ಮುದ್ರೆ ಭಂಗವಾಗುವುದಿಲ್ಲ. ಹಝ್ರತ್ ಈಸಾ ಸ್ವತಃ ಇಳಿದು ಬರುವರೆಂಬ ಯೋಚನೆ

وَلٰكِنْ رَّسُوْلَ اللّٰهِ وَخَاتَمَ النَّبِيّٖنَ

ಎಂಬ ವಚನಕ್ಕೆ[18] ವಿರುದ್ಧವಾಗಿದೆ. ಅದು ಖತಮಿಯ್ಯತಿನ ಮುದ್ರೆಯನ್ನು ಮುರಿದು ಹಾಕುತ್ತಿದೆ. ಈ ನಿರರ್ಥಕ ವಿಶ್ವಾಸಕ್ಕೆ ಪವಿತ್ರ ಖುರ್‌ಆನಿನಲ್ಲಿ ಯಾವ ಸೂಚನೆ ಕೂಡ ಇಲ್ಲ. ಮೇಲೆ ಉಲ್ಲೇಖಿಸಿದ ವಚನಕ್ಕೆ ನೇರ ವಿರುದ್ಧವಾಗಿ ಬೇರೊಂದು ವಚನವಿರಲು ಸಾಧ್ಯವೂ ಇಲ್ಲ. ಆದರೆ ಒಬ್ಬ ತದ್ರೂಪಿ ನಬಿ ಮತ್ತು ರಸೂಲ್ ಆಗಮಿಸುವ ಬಗ್ಗೆ ಪವಿತ್ರ ಖುರ್‌ಆನಿನಿಂದ ಸಾಬೀತಾಗುತ್ತದೆ.

وَّاٰخَرِيْنَ مِنْهُمْ

– **ವ ಆಖರೀನ ಮಿನ್‌ಹುಮ್** ಎಂಬ ವಚನದಿಂದ[19] ಇದು ಸ್ಪಷ್ಟವಾಗುತ್ತದೆ. ಈ

18. ಆದರೆ ಅವರು ಅಲ್ಲಾಹನ ಸಂದೇಶವಾಹಕರೂ ಪ್ರವಾದಿಗಳ ಮುದ್ರೆಯೂ ಆಗಿದ್ದಾರೆ. **(33:41)**
19. ಅವರ ಪೈಕಿಯ ಇನ್ನೊಂದು ಜನತೆಯಲ್ಲೂ **(ಪವಿತ್ರ ಖುರ್‌ಆನ್ 62:4)**

ವಚನದಲ್ಲಿರುವ ಒಂದು ಸೂಕ್ಷ್ಮ ವಿಚಾರವೇನೆಂದರೆ, ಸಹಾಬರಂತಿರುವ ಜನರ ಬಗ್ಗೆ ಈ ವಚನದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ಆಗಮಿಸಲಿರುವ ತದ್ರೂಪಿ ವ್ಯಕ್ತಿಯ ಬಗ್ಗೆ ವಿಶದೀಕರಿಸಿಲ್ಲ. ಎಂದರೆ ಮಸೀಹ್ ಮೌಊದ್ ಬಗ್ಗೆ ಹೇಳಿಲ್ಲ. ಅವರ ಮೂಲಕವೇ ಅವರ ಅನುಯಾಯಿಗಳು ಸಹಾಬರಾಗುವರು. ಅವರು ಸಹಾಬರ ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ತರಬೇತಿ ಪಡೆದವರಾಗಿ ಗಣಿಸಲ್ಪಡುವರು. ತದ್ರೂಪಿಯಾಗಿ ಆಗಮಿಸುವ ವ್ಯಕ್ತಿ ಪ್ರತ್ಯೇಕ ಅಸ್ತಿತ್ವ ಹೊಂದಿದವನಲ್ಲ ಎಂಬುದನ್ನು ಸೂಚಿಸಿಲಿಕ್ಕಾಗಿ ತದ್ರೂಪಿಯ ಬಗ್ಗೆ ಪ್ರಸ್ತಾಪಿಸಲಾಗಿಲ್ಲ. ಆದುದರಿಂದ ಆ ತದ್ರೂಪಿ ನುಬುವ್ವತ್ ಮತ್ತು ರಿಸಾಲತಿನಿಂದ ಖತಮಿಯ್ಯತಿನ ಮುದ್ರೆ ಮುರಿದು ಹೋಗುವುದಿಲ್ಲ. ಈ ವಚನದಲ್ಲಿ ತದ್ರೂಪಿಯ ಅಸ್ತಿತ್ವವನ್ನು ಇಲ್ಲದ ಹಾಗೆ ಮಾಡಲಾಗಿದೆ. ಅದಕ್ಕೆ ಬದಲಾಗಿ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನೇ ಮುಂದಿರಿಸಲಾಗಿದೆ. ಇದೇ ರೀತಿ

إِنَّآ أَعْطَيْنٰكَ الْكَوْثَرَ ○

ಎಂಬ ಪವಿತ್ರ ಖುರ್‌ಆನಿನ ವಚನದಲ್ಲಿ[20] ಒಬ್ಬ ತದ್ರೂಪಿಯ ವಾಗ್ದಾನ ನೀಡಲಾಗಿದೆ. ಅವರ ಕಾಲದಲ್ಲಿ ಕೌಸರ್ ಪ್ರಕಟವಾಗುವುದು. ಎಂದರೆ ಧಾರ್ಮಿಕ ಅನುಗ್ರಹಗಳ ಕಾರಂಜಿಗಳು ಹೊರಹೊಮ್ಮುವುವು. ಲೋಕದಲ್ಲಿ ಸತ್ಯವಂತರಾದವರು ಮುಸ್ಲಿಮರಾಗುವರು. ಈ ವಚನದಲ್ಲೂ ಬಾಹ್ಯ ಸಂತಾನದ ಆವಶ್ಯಕತೆಯನ್ನು ಹೀನ ದೃಷ್ಟಿಯಿಂದ ಕಂಡು ತದ್ರೂಪಿ ಸಂತಾನದ ಭವಿಷ್ಯ ನುಡಿಯಲಾಗಿದೆ. ನನ್ನನ್ನು ಇಸ್ರಾಈಲೀ ವಂಶಜನನ್ನಾಗಿಯೂ ಫಾತಿಮೀ ವಂಶಜನನ್ನಾಗಿಯೂ ಮಾಡಿಕೊಂಡು ಅಲ್ಲಾಹನು ನನಗೆ ಗೌರವ ನೀಡಿದ್ದರೂ ನಾನು ಆಧ್ಯಾತ್ಮಿಕ ಸಂಬಂಧಕ್ಕೆ ಆದ್ಯತೆ ನೀಡುತ್ತೇನೆ. ಅದು ನನಗೆ ಹಝ್ರತ್ ಪೈಗಂಬರ್‌ರೊಂದಿಗೆ[ಸ] ಇರುವ ತದ್ರೂಪಿ ಸಂಬಂಧವಾಗಿದೆ.

ನಾನು ಮೇಲೆ ಬರೆದ ಎಲ್ಲ ವಿಷಯಗಳ ಸಾರಾಂಶವಾಗಿ ನಾನು ಹೇಳುವುದೇನೆಂದರೆ, ಅಜ್ಞಾನಿಗಳಾದ ವಿರೋಧಿಗಳು ನನ್ನ ಬಗ್ಗೆ ಈ ವ್ಯಕ್ತಿ ನಬಿ ಮತ್ತು ರಸೂಲ್ ಎಂದು ವಾದಿಸುತ್ತಾನೆ ಎಂದು ಹೇಳುತ್ತಾರೆ. ನನಗೆ ಅಂತಹ ವಾದವಿಲ್ಲ. ನಾನು ಅವರು ಭಾವಿಸುವ ರೀತಿಯ ನಬಿಯೂ ಅಲ್ಲ,

20. ನಿಶ್ಚಯವಾಗಿಯೂ ನಾವು ನಿನಗೆ 'ಕೌಸರ್' ದಯಪಾಲಿಸಿದ್ದೇವೆ. **(ಪ. ಖುರ್‌ಆನ್ 108:2)**

ರಸೂಲೂ ಅಲ್ಲ. ಆದರೆ ನಾನು ಮೇಲೆ ವಿವರಿಸಿದ ರೀತಿಯ ನಬಿ ಮತ್ತು ರಸೂಲ್ ಆಗಿರುವೆನು. ನನ್ನ ಶತ್ರುಗಳು ಭಾವಿಸುವ ರೀತಿಯ ನುಬುವ್ವತ್ ಮತ್ತು ರಿಸಾಲತ್ ನಾನು ವಾದಿಸುತ್ತೇನೆಂದು ಹೇಳುವುದು ಸುಳ್ಳು ಮತ್ತು ಕೊಳಕು ಆಲೋಚನೆ ಆಗಿದೆ. ನನ್ನನ್ನು ತದ್ರೂಪಿ ಸ್ಥಿತಿಯಲ್ಲಿ ರಸೂಲ್ ಮತ್ತು ನಬಿಯಾಗಿ ಮಾಡಲಾಗಿದೆ. ಇದೇ ಉದ್ದೇಶದಿಂದ ಅಲ್ಲಾಹನು ಪದೇ ಪದೇ ನನ್ನ ಹೆಸರನ್ನು ನಬಿಯುಲ್ಲಾಹ್ ಮತ್ತು ರಸೂಲುಲ್ಲಾಹ್ ಎಂದು ಇರಿಸಿದ್ದಾನೆ. ಆದರೆ ಅದು ಬರೂಝಿ (ತದ್ರೂಪಿ) ರೂಪದಲ್ಲಾಗಿದೆ. ನನ್ನ ಸ್ವಂತ ಅಸ್ತಿತ್ವ ಮಧ್ಯದಲ್ಲೇನೂ ಇಲ್ಲ; ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಇರುವರು. ಇದೇ ಕಾರಣದಿಂದ ನನ್ನ ಹೆಸರು ಮುಹಮ್ಮದ್ ಮತ್ತು ಅಹ್ಮದ್ ಎಂದಾಯಿತು. ಒಟ್ಟಿನಲ್ಲಿ ನುಬುವ್ವತ್ ಮತ್ತು ರಿಸಾಲತ್ ಬೇರೆ ಯಾರ ಸಮೀಪಕ್ಕೂ ಹೋಗಿಲ್ಲ. ಮುಹಮ್ಮದರ(ಸ) ವಸ್ತು ಮುಹಮ್ಮದರ(ಸ) ಬಳಿಯೇ ಇದೆ. ಅವರ ಮೇಲೆ ಅನುಗ್ರಹ ಮತ್ತು ಶಾಂತಿ ವರ್ಷಿಸಲಿ.

ವಿನೀತ,

**ಮಿರ್ಝಾ ಗುಲಾಮ್ ಅಹ್ಮದ್**

ಖಾದಿಯಾನ್

5–11–1901